ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 9 ಸಂ. 6 ಜೂನ್ 2012 ರೂ.25

## ಅನಿಸಿಕೆಗಳು

ಗುರೂಜಿ ಕೃಷ್ಣಾನಂದ
ಅನುವಾದ: ಚಂಪಾ ಬಿ.

2012ರ ಮೇ 7 ರಂದು ಜಗತ್ತಿನೆಲ್ಲೆಡೆಯಿಂದ ಸಾವಿರಾರು ಜನರು ಬೆಳಕನ್ನು ಚಾನಲ್ ಮಾಡುವ ಮೂಲಕ ಬೆಳಕಿನ ಕ್ರಾಂತಿಯು ಮತ್ತೊಂದು ಹಂತವನ್ನು ಪ್ರವೇಶಿಸಿದಂತಾಯಿತು. ಇದನ್ನು ನಾವಿಲ್ಲಿಗೇ ನಿಲ್ಲಿಸಬಾರದು. ನಾವು ಪ್ರತಿದಿನ ಬೆಳಕನ್ನು ಚಾನಲ್ ಮಾಡಬೇಕು. ಹೆಚ್ಚು ಹೆಚ್ಚು ಜನರು ಇದರಲ್ಲಿ ಪಾಲ್ಗೊಳ್ಳಬೇಕು. ಕ್ರಾಂತಿಗಳು ಆರಂಭವಾಗಿ ಅಲ್ಪಾವಧಿಯಲ್ಲಿ ಮುಗಿಯುವುದಿಲ್ಲ. ಇದಂತೂ ಮುಗಿಯುವಂಥದ್ದಲ್ಲ. ಇದು ಮೌನ ಕ್ರಾಂತಿ ಕೂಡ. ಆದರೆ ನನಗೆ ಗೊತ್ತು, ಇದು ಬಹಳ ಪರಿಣಾಮಕಾರಿ.

ಕ್ರಾಂತಿಯು ಸೂಕ್ಷ್ಮ ಮಟ್ಟದಲ್ಲಿಯೂ ನಡೆಯುತ್ತಿದೆ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಜಗತ್ತಿನೆಲ್ಲೆಡೆ ಹರಡಿರುವ ಋಷಿಗಳ ಜಾಲವು ಈ ಕೆಲಸ ಮಾಡುತ್ತಿದೆ. ಬಾಹ್ಯಾಕಾಶದ ಇತರ ಮಾಸ್ಟರ್‌ಗಳು ತಮ್ಮ ಶಕ್ತಿ ಹಾಗೂ ಜ್ಞಾನಗಳೊಂದಿಗೆ ಇದಕ್ಕೆ ಸಹಕರಿಸುತ್ತಿದ್ದಾರೆ. ಅವರು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿರುವ ಕೆಲವು ಜ್ಯೋತಿ ಕಾರ್ಯಕರ್ತರ ಸಂಪರ್ಕದಲ್ಲಿದ್ದಾರೆ. ಶೀಘ್ರದಲ್ಲೇ ಭೂಮಿಯ ಮೇಲಿನ ಪ್ರತಿಯೊಬ್ಬರನ್ನೂ ಭೌತಿಕ ಮಟ್ಟದಲ್ಲಿ ಅಥವಾ ಆಧ್ಯಾತ್ಮಿಕ ಮಟ್ಟದಲ್ಲಿ ಸಂಪರ್ಕಿಸಿ 2012ರ ಕೊನೆಯಲ್ಲಿ ನಮ್ಮನ್ನು ಉನ್ನತಮಟ್ಟಕ್ಕೆ ಕೊಂಡೊಯ್ಯಬಹುದಾದ ಅವಕಾಶಗಳ ಬಗ್ಗೆ ತಿಳಿಹೇಳಲಾಗುವುದು.

2008ರಲ್ಲಿ ಆರಂಭವಾದ ಬೆಳಕಿನ ಕ್ರಾಂತಿಯ ಪರಿಣಾಮವನ್ನು ನಾನು ನೋಡುತ್ತಲೇ ಇದ್ದೇನೆ. ಅರಿವಿನ ಉದಯವನ್ನು, ಭ್ರಷ್ಟ ವ್ಯವಸ್ಥೆಗಳ ನಿರಾಕರಣೆಯನ್ನು, ಶಾಂತಿಯುತ ಹಾಗೂ ನ್ಯಾಯಸಮ್ಮತ ಬಾಳಿನ ಹಂಬಲ ಇವೆಲ್ಲವನ್ನೂ ಗಮನಿಸುತ್ತಿದ್ದೇನೆ. ಬದಲಾವಣೆಗಳ ಅಲೆಯ ಉಬ್ಬರವು ಜಗತ್ತಿನೆಲ್ಲೆಡೆ ಹರಡುತ್ತಿರುವುದನ್ನು ಕಾಣುತ್ತಿದ್ದೇನೆ. ಬದಲಾವಣೆಗಳ ಶಕ್ತಿಯ ಅಲೆಗಳನ್ನು ಅನುಭವಿಸುತ್ತಿದ್ದೇನೆ. ಅವು ಸಂಪೂರ್ಣವಾಗಿ ಭೌತ ಮಟ್ಟದಲ್ಲಿ ಪ್ರಕಟವಾಗಲು ಇನ್ನೂ ಕೆಲ ಸಮಯ ಬೇಕಾದೀತು. ಆದರೆ ಅವು ಪ್ರಕಟವಾಗಿಯೇ ಆಗುತ್ತವೆ.

ನಾವೀಗ ಸಂಧಿಕಾಲದ ಬಹಳ ವಿಶೇಷವಾದ ಘಟ್ಟವನ್ನು ಹಾದುಹೋಗುತ್ತಿದ್ದೇವೆ. ನಾವು ಅಸಮರ್ಪಕ ಹಾಗೂ ಭ್ರಷ್ಟ ವ್ಯವಸ್ಥೆಗಳ ನಡುವೆ ಇದ್ದುಕೊಂಡು ಒಂದು ಮೌಲ್ಯಾಧಾರಿತ ವ್ಯವಸ್ಥೆಯನ್ನು ಆಯ್ಕೆ ಮಾಡಿ, ಸುತ್ತಮುತ್ತಲಿನ ದುರಾಸೆ ಹಾಗೂ ಹಿಂಸಾಚಾರಗಳ ಮಧ್ಯದಲ್ಲಿ ಉತ್ತಮ ನಾಳಿನ ಭರವಸೆಯನ್ನು ಕಳೆದುಕೊಳ್ಳದೆ ಸಮಚಿತ್ತತೆಯಲ್ಲಿರಬೇಕಾಗುತ್ತದೆ. ಇದು ನಿಜಕ್ಕೂ ಸವಾಲೊಡ್ಡುವ ಸಮಯವೆ. ಇನ್ನೂ ಹೆಚ್ಚಿನ ಅವ್ಯವಸ್ಥೆ, ಗೊಂದಲ ಉಂಟಾಗಬಹುದು. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ಸಮಚಿತ್ತತೆ ಹಾಗೂ ಭರವಸೆಯನ್ನು ಕಳೆದುಕೊಳ್ಳದಿರುವುದು ಅತಿ ಮುಖ್ಯ. ಅದಕ್ಕಿರುವುದು ಒಂದೇ ದಾರಿ, ಅಧ್ಯಾತ್ಮದ ದಾರಿ : ಧ್ಯಾನ ಮಾಡುವುದು ಮತ್ತು ಭೂಮಿಯೆಡೆಗೆ ಪ್ರವಾಹೋಪಾದಿಯಲ್ಲಿ ಬರುತ್ತಿರುವ ಅಧ್ಯಾತ್ಮ ಚೈತನ್ಯಗಳಿಂದ ನೆರವು ಪಡೆಯುವುದು.

ಬೆಳಕಿನಿಂದ ನೆರವು ಪಡೆಯುವುದು ಅತ್ಯುತ್ಕೃಷ್ಟ ಆಯ್ಕೆ. ಹೆಚ್ಚು ಜನರಿಗೆ ಇದು ಈಗ ಅರ್ಥವಾಗುವುದಿಲ್ಲ. ಆದರೆ ಅಂತಿಮವಾಗಿ ಪ್ರತಿಯೊಬ್ಬರೂ ಬೆಳಕಿನೆಡೆಗೆ ಮುಖ ಮಾಡುತ್ತಾರೆ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.




7 ಮೇ 2012 – ಗುರೂಜಿಯವರು ಲೈಟ್ ಚಾನಲ್ಸ್ ಸಮಾವೇಶದಲ್ಲಿ ಮಾತನಾಡುತ್ತಿರುವುದು.

## ಸುದ್ದಿ-ಸೂಚನೆ

- 7-5-2012 ರಂದು ಬೆಂಗಳೂರು ನಗರದ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಜರುಗಿದ 'ಲೈಟ್ ಚಾನಲ್ಸ್ ಸಮಾವೇಶ'ದಲ್ಲಿ ಸುಮಾರು 1000 ಜನರು ಭಾಗವಹಿಸಿದ್ದರು. ಸಹಸ್ರಾರು ಜನರು ತಮ್ಮತಮ್ಮ ಸ್ಥಳಗಳಿಂದಲೇ ವೆಬ್‌ಕಾಸ್ಟ್ ನೇರ ಪ್ರಸಾರದ ಮೂಲಕ ಮತ್ತು ಪ್ರಪಂಚದಾದ್ಯಂತ ತಮ್ಮತಮ್ಮ ಮನೆಗಳಲ್ಲೇ ಕುಳಿತು ಲೈಟ್ ಚಾನಲ್ ಮಾಡುವ ಮೂಲಕ ಭಾಗವಹಿಸಿದ್ದರು.
- ಈ ಸಮಾವೇಶದ ಸಂದರ್ಭದಲ್ಲಿ "Experiences of Light Channels" ಪುಸ್ತಕವನ್ನು ಗುರೂಜಿಯವರು ಬಿಡುಗಡೆ ಮಾಡಿದರು. ಈ ಪುಸ್ತಕದ ಉಚಿತ ಪ್ರತಿಯನ್ನು ಪಡೆಯಲಿಚ್ಛಿಸುವವರು ನಮ್ಮ ಆಫೀಸನ್ನು ಸಂಪರ್ಕಿಸಿ. ಇದರ ಇ-ಪುಸ್ತಕವು ನಮ್ಮ ವೆಬ್‌ಸೈಟ್‌ನಲ್ಲಿ ಉಚಿತವಾಗಿ ದೊರೆಯುತ್ತದೆ.
- ಗುರೂಜಿಯವರು ಎಲ್ಲಾ ಲೈಟ್ ಚಾನಲಿಂಗ್ ಕಾರ್ಯಕರ್ತರನ್ನು ನೆನಪಿನ ಕಾಣಿಕೆಯನ್ನು ನೀಡುವುದರ ಮೂಲಕ ಸನ್ಮಾನಿಸಿದರು.
- 19-5-2012ರಂದು ಆನೇಕಲ್‌ನ ನಮ್ಮ ಸಪ್ತರ್ಷಿ ಧ್ಯಾನಕೇಂದ್ರದಲ್ಲಿ ಮತ್ತು 20-5-2012ರಂದು ತಪೋನಗರದಲ್ಲಿ ಗುರೂಜಿಯವರ ಜನ್ಮದಿನವನ್ನು ಆಚರಿಸಲಾಯಿತು.
- ತಪೋನಗರದಲ್ಲಿ 20-5-2012ರಂದು ಆಯೋಜಿಸಿದ್ದ ಗುರೂಜಿಯವರ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ "Guruji Speaks (Vol-5)", "Quotes from the Rishis", ಕನ್ನಡಕ್ಕೆ ಅನುವಾದಿಸಿದ "Channelled Knowledge from the Rishis (Vol-2)" ಮತ್ತು ಮರಾಠಿಗೆ ಅನುವಾದಿಸಿದ "Master-Pupil Talks" ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.

## ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು : ಬೆಳಿಗ್ಗೆ 11-12 ವಿಶೇಷ ಧ್ಯಾನ ಮತ್ತು ಲೈಟ್ ಚಾನಲಿಂಗ್: ಮಧ್ಯಾಹ್ನ 12-1 |
| 04-06-12 | ಚಂದ್ರ ಗ್ರಹಣ ವಿಶೇಷ ಧ್ಯಾನ: ಮಧ್ಯಾಹ್ನ 2.18 – ಸಂಜೆ 6.48 |

## ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 04 | ಸೋಮ | ಪೂರ್ಣಿಮಾ ಚಂದ್ರ ಗ್ರಹಣ: ಮಧ್ಯಾಹ್ನ 2.18 ಸಂಜೆ 6.48 ರವರೆಗೆ |
| 12 | ಮಂಗಳ | ಕೃಷ್ಣಾಷ್ಟಮಿ |
| 17 | ಭಾನು | ಮಾಸ ಶಿವರಾತ್ರಿ |
| 19 | ಮಂಗಳ | ಅಮಾವಾಸ್ಯೆ |
| 20 | ಬುಧ | ಆಷಾಢ ಮಾಸ ಆರಂಭ |
| 27 | ಬುಧ | ಶುಕ್ಲ ಅಷ್ಟಮಿ |
| 29 | ಶುಕ್ರ | ಶುಕ್ಲ ದಶಮಿ |

09-6-2012 ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ನಮ್ಮ ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.

ಈಗ www.lightagemasters.com ವೆಬ್‌ಸೈಟ್ ಮೂಲಕ ಹೊರದೇಶಗಳಲ್ಲಿ ವಾಸಿಸುವ ನಮ್ಮ ಸಾಧಕರು ತಮ್ಮ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಆನ್‌ಲೈನ್‌ನಲ್ಲಿ ಹಣ ಕಳುಹಿಸುವ ವ್ಯವಸ್ಥೆಯನ್ನು ಒದಗಿಸಲಾಗಿದೆ.

ಈಗ ಗುರೂಜಿಯವರು 'Speaking Tree' ಯ ಮಾಸ್ಟರ್‌ಗಳ ಸಾಲಿಗೆ ಸೇರ್ಪಡೆಯಾಗಿದ್ದಾರೆ. ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.

## ಲೈಟ್ ಚಾನಲ್ಸ್ ಸಮಾವೇಶ, ಮೇ 7, 2012

**ಜಯಂತ್ ದೇಶ್‌ಪಾಂಡೆ; ಅನು: ವರ್ಷ ದೀಪಕ್**

ಗುರೂಜಿಯವರು 2008ರಲ್ಲಿ ಲೈಟ್ ಚಾನಲಿಂಗ್ ಪ್ರಾರಂಭಿಸಿದರು. ಅಂದಿನಿಂದ ಧ್ಯಾನಿಗಳಾದ ನಾವು ಬೆಳಕನ್ನು ಚಾನಲ್ ಮಾಡುತ್ತಾ ಇದ್ದೇವೆ. ನಂತರ 2009ರಲ್ಲಿ ಇದನ್ನು ಶಾಲಾಮಕ್ಕಳಿಗೆ ಪರಿಚಯಿಸಲಾಯಿತು. ಅಂದಿನಿಂದ ಸುಮಾರು 2 ಮಿಲಿಯನ್ ಮಕ್ಕಳು ಬೆಳಕನ್ನು ಚಾನಲ್ ಮಾಡಿದ್ದಾರೆ. ಗುರೂಜಿಯವರು 2012ರ ಘಟನೆಗಳ ಆಧ್ಯಾತ್ಮಿಕ ಮಹತ್ವದ ಬಗ್ಗೆ ಮತ್ತು ಪ್ರಜ್ಞೆಯ ಮಟ್ಟದಲ್ಲಿನ ಅತಿದೊಡ್ಡ ಕ್ರಾಂತಿಯ ಬಗ್ಗೆ ನಮ್ಮ ತರಗತಿಗಳಲ್ಲಿ ಕೂಡಾ ಹೇಳುತ್ತಿದ್ದಾರೆ. ಈ ಎಲ್ಲಾ ಜ್ಞಾನ ಮತ್ತು ಜಾಗೃತಿಯನ್ನು ಇಡೀ ಪ್ರಪಂಚಕ್ಕೆ ಹರಡಬೇಕು. ಮೇ 7ರ ಕಾರ್ಯಕ್ರಮವು ಈ ಪ್ರಯತ್ನದೆಡೆಗೆ ನಾಂದಿಯಾಗಿದೆ; ಇದು ಅತಿದೊಡ್ಡ ಮತ್ತು ಕಟ್ಟಕಡೆಯ ಬೆಳಕಿನ ಕ್ರಾಂತಿಯನ್ನು ಹರಡುವ ಪ್ರಯತ್ನವಾಗಿದೆ.

ಈ ಕಾರ್ಯಕ್ರಮದ ಸಿದ್ಧತೆಯು ಬಹಳ ಮುಂಚಿತವಾಗಿಯೇ ಫೆಬ್ರವರಿಯಲ್ಲಿ ಆರಂಭವಾಯಿತು. ಭೌತಿಕ ಮಟ್ಟದಲ್ಲಿ ನಮ್ಮ ಕಾರ್ಯಕರ್ತರು ಗುರೂಜಿಯವರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಸೂಕ್ಷ್ಮಮಟ್ಟದಲ್ಲಿ ಗುರೂಜಿಯವರು ಅನೇಕ ಆ್ಯಸ್ಟ್ರಲ್ ಮಾಸ್ಟರ್‌ಗಳನ್ನು ಈ ಕಾರ್ಯಕ್ರಮವನ್ನು ಆಶೀರ್ವದಿಸಲು ಆಮಂತ್ರಿಸುವ ಕೆಲಸ ಮಾಡುತ್ತಿದ್ದರು. ಇದರ ಸಂಪೂರ್ಣ ಯೋಜನೆಯ ಹಂತದ ನಂತರ, ಅದನ್ನು ಕುಂದಿಲ್ಲದಂತೆ ಕಾರ್ಯರೂಪಕ್ಕೆ ತರುವ ಹಂತ ಆರಂಭವಾಯಿತು. ಕಾರ್ಯಕರ್ತರ ಪ್ರೀತಿ, ಸಮರ್ಪಣಾ ಭಾವ, ಕಠಿಣ ಪರಿಶ್ರಮ ಮತ್ತು ಋಷಿಗಳ ಅನುಗ್ರಹದಿಂದಾಗಿ ಈ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಯಿತು. ಕೆಲಸದ ಪ್ರತಿಯೊಂದು ಹಂತದಲ್ಲೂ ಬೆಳಕಿನ ಸಹಾಯವನ್ನು ಎಲ್ಲರೂ ಅನುಭವಿಸಿದರು.

ಅಂದು ಸುಮಾರು ಸಾವಿರ ಜನರು ಚೌಡಯ್ಯ ಮೆಮೋರಿಯಲ್ ಸಭಾಂಗಣದಲ್ಲಿ ಸೇರಿದ್ದರು. ಕಾರ್ಯಕ್ರಮದಲ್ಲಿ ಶಂಬಲದ ಮಾಸ್ಟರ್‌ಗಳು ಮತ್ತು ಇನ್ನೂ ಅನೇಕ ಮಾಸ್ಟರ್‌ಗಳು ಸೂಕ್ಷ್ಮಮಟ್ಟದಲ್ಲಿ ಉಪಸ್ಥಿತರಿದ್ದರು. ಗುರೂಜಿಯವರು ಋಷಿಗಳ ಸಂದೇಶವನ್ನು ಅತ್ಯಂತ ಸ್ಪಷ್ಟವಾಗಿ, ಸರಳವಾಗಿ ಮತ್ತು ನಮ್ರತೆಯಿಂದ ನೀಡುತ್ತಿದ್ದಾಗ, ಸಾವಿರಾರು ಜನರು ಪ್ರಪಂಚದೆಲ್ಲೆಡೆ ಇದರ ನೇರಪ್ರಸಾರವನ್ನು ವೀಕ್ಷಿಸಿದರು. 7.45ಕ್ಕೆ ಲೈಟ್ ಚಾನಲಿಂಗ್ ಆರಂಭವಾಗಿ, ಬುದ್ಧಪೂರ್ಣಿಮೆಯಂದು ಕೆಳತಂದಿದ್ದ ಚೈತನ್ಯವನ್ನು ಪ್ರಪಂಚಕ್ಕೆ ಹರಡುತ್ತಿದ್ದಾಗ ಇಡೀ ಸಭಾಂಗಣ ಒಂದು ತೆರನಾದ ದೈವಿಕ ನಿಶ್ಶಬ್ದದಿಂದ ತುಂಬಿತ್ತು. ಪ್ರಪಂಚದ ವಿವಿಧ ಭಾಗಗಳಿಂದ ಲಕ್ಷಾಂತರ ಜನರು ಅದೇ ಸಮಯದಲ್ಲಿ ಲೈಟ್ ಚಾನಲಿಂಗ್ ಮಾಡುವ ಮುಖಾಂತರ ಭಾಗವಹಿಸಿದರು. 15 ನಿಮಿಷಗಳ ಲೈಟ್ ಚಾನಲಿಂಗ್ ನಂತರ ಗುರೂಜಿಯವರು ಲೈಟ್ ಚಾನಲ್ ಕಾರ್ಯಕರ್ತರನ್ನು, ನೆನಪಿನ ಕಾಣಿಕೆಯನ್ನು ನೀಡುವುದರ ಮೂಲಕ ಸನ್ಮಾನಿಸಿದರು. ಅವರಲ್ಲಿ ಅನೇಕರು ಕೃತಜ್ಞತಾಭಾವದಿಂದ ಮೂಕರಾಗಿದ್ದರು ಮತ್ತು ಇನ್ನೂ ಅನೇಕರು, ಇದು ಅವರ ಜೀವನದ ಸಾರ್ಥಕ ಕ್ಷಣ ಎಂದು ವ್ಯಕ್ತಪಡಿಸಿದರು.

ಹೆಚ್ಚು ದೂರವಿರದ ಹೊಸಯುಗದ ಬಗ್ಗೆ, ಉಜ್ವಲ ಭವಿಷ್ಯದ ಬಗ್ಗೆ ಋಷಿಗಳು ಸಮಾವೇಶದಲ್ಲಿ ನೀಡಿರುವ ಭರವಸೆ ಜನರಲ್ಲಿ ಆಶಾಕಿರಣವನ್ನು ಮೂಡಿಸಿದೆ. ■

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್ ಸೋಮಯಾಜಿ; ಅನು: ವರ್ಷ ದೀಪಕ್**

ಏಪ್ರಿಲ್ ತಿಂಗಳು ಯುಗಾದಿಯ ಹೊಸ ಚೈತನ್ಯಗಳು ಮತ್ತು ಅಕ್ಷಯ ತೃತೀಯದ ವಿಶೇಷ ಚೈತನ್ಯಗಳನ್ನು ತಂದಿದೆ. ಗುಡ್ ಫ್ರೈಡೆಯನ್ನು ಧ್ಯಾನಮಾಡುವುದರ ಮೂಲಕ ಆಚರಿಸಲಾಯಿತು.

ಮೇ 2012ರ ಲೈಟ್ ಚಾನಲಿಂಗ್ ಕಾರ್ಯಕ್ರಮದ ಕೆಲಸ ಮಾಡುತ್ತಿರುವ ನಮ್ಮ ಕಾರ್ಯಕರ್ತರ ಭಾವತೀವ್ರತೆಗೆ, ಹೆಚ್ಚುತ್ತಿದ್ದ ಬೇಸಿಗೆಯ ತಾಪಮಾನದ ಬಿಸಿ ತಟ್ಟುತ್ತಿರಲಿಲ್ಲ. ಅದಕ್ಕಾಗಿ ಕ್ರಮಬದ್ಧವಾದ ಮೀಟಿಂಗ್‌ಗಳು, ಯೋಜನೆಗಳು, ಪೂರ್ವಭಾವಿ ವ್ಯವಸ್ಥೆ ಮುಂತಾದವುಗಳಿಂದ ಈ ತಿಂಗಳು ಕೂಡಿತ್ತು. ಈ ಎಲ್ಲಾ ಕೆಲಸದ ಸುಳಿಯ ನಡುವೆ, ಅವೆಲ್ಲದರ ಕೇಂದ್ರದಲ್ಲಿ, ತಪೋನಗರದ ಆತ್ಮ – ನಮ್ಮ ಗುರೂಜಿ – ಏಕಾಂತದಲ್ಲಿ ಕುಳಿತು ಹೊಸ ಚೈತನ್ಯಗಳೊಂದಿಗೆ ಕೆಲಸಮಾಡುತ್ತಾ, ನಮಗೆ ಅರ್ಥವಾಗದ ಅನೇಕ ಸೂಕ್ಷ್ಮ ಮಟ್ಟದಲ್ಲಿನ ಯೋಜನೆಗಳಿಗೆ ಗಮನ ಕೊಡುತ್ತಿದ್ದರು. ನಿಶ್ಶಬ್ದ ಮತ್ತು ಶಕ್ತಿಯುತವಾಗಿರುವ ಗ್ಯಾಲಕ್ಸಿಯ ಕೇಂದ್ರದಂತೆ ಅವರು ಈ ಕಾರ್ಯಕ್ರಮದ ಪ್ರತಿಯೊಂದು ವ್ಯವಸ್ಥೆಯನ್ನು ಗಮನಿಸಿ ಮಾರ್ಗದರ್ಶಿಸುತ್ತಿದ್ದರು. ಚಿಕ್ಕದಾದ ಮತ್ತು ಸರಳವಾದ ತಪೋನಗರದಂತಹ ಸ್ಥಳದಲ್ಲಿ ಬೆಳಕಿನ ಮಾಸ್ಟರ್‌ಗಳ ದೊಡ್ಡದಾದ ಮತ್ತು ಜಟಿಲವಾದ ಯೋಜನೆಯೊಂದು ಕಾರ್ಯರೂಪವನ್ನು ಪಡೆಯಿತು.

ಪೂರ್ವನಿಯೋಜಿತ ಕೆಲಸಗಳ ಮಧ್ಯೆಯೂ ಗುರೂಜಿಯವರು ತಪೋನಗರ ನಿವಾಸಿಗಳ ಕೂಟಕ್ಕೆ ಬಂದು ಅಲ್ಲಿ ನಮಗೆ ಒಂದು ಮುಖ್ಯವಾದ ವಿಷಯವನ್ನು ತಿಳಿಸಿದರು. ಈ ಇಡೀ ಸ್ಥಳವು ಕಲ್ಲುಬಂಡೆಯ ಮೇಲಿದ್ದು, ಅಂತರ್ಜಲವನ್ನು ಪಡೆಯುವ ಅನೇಕ ಪ್ರಯತ್ನಗಳು ವಿಫಲವಾದರೂ, ನೀರಿನ ಕೊರತೆ ಮತ್ತು ಅತಿಯಾದ ಬಿಸಿಲಿನ ಬೇಗೆ ಇಲ್ಲಿನ ನಿವಾಸಿಗಳನ್ನು ತಟ್ಟುತ್ತಿರಲಿಲ್ಲ. ಹಳ್ಳಿಯ ಟ್ಯಾಂಕರ್‌ಗಳು ನಮ್ಮ ದೈನಂದಿನ ಬಳಕೆಗೆ ಬೇಕಾಗುವ ನೀರು ಹೆಚ್ಚೂ ಇಲ್ಲ, ಕಡಿಮೆಯೂ ಇಲ್ಲ ಎಂಬಂತೆ ಪೂರೈಸುತ್ತಿವೆ. ಇದು ದೇವರ ಒಂದು ಅನುಗ್ರಹ ಎಂದು ಗುರೂಜಿಯವರು ತಿಳಿಸಿದರು. ನಮಗೆ ಇದು ಸಂಪೂರ್ಣವಾಗಿ ಗುರೂಜಿಯವರ ಅನುಗ್ರಹವಾಗಿದೆ. ■

## ಲೈಟ್ ಚಾನಲ್ಸ್

### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

01–04–2012

ಜೀವನದಲ್ಲಿ ಧ್ಯಾನ ಅತ್ಯಂತ ಗುರುತರವಾದ ವಿಷಯವಾಗಿದೆ. ಅದು ಸೃಷ್ಟಿಯ ಹಿಂದೆ ಇರುವ ಬುದ್ಧಿಶಕ್ತಿ, ಮತ್ತು ಸೃಷ್ಟಿಯ ಮೂಲವಾದ ದೇವತೊಂದಿಗೆ ನಾವು ಸಂಬಂಧವನ್ನು ಬೆಳೆಸುವ ಒಂದು ಪ್ರಕ್ರಿಯೆ. ಅದರ ನೇರವಾದ ಅನುಭವದಿಂದ ನಾವು ಇಲ್ಲಿ ಏಕೆ ಇದ್ದೇವೆ, ನಮಗೆ ಸಮಸ್ಯೆಗಳೇಕೆ ಇವೆ, ಇತ್ಯಾದಿ ವಿಷಯಗಳನ್ನು ಅರ್ಥ ಮಾಡಿಕೊಳ್ಳುತ್ತೇವೆ.

ಜೀವನದಲ್ಲಿ ಸಣ್ಣ ಸಣ್ಣ ವಿವರಗಳೊಂದಿಗೆ ಆಧ್ಯಾತ್ಮಿಕತೆ ಪ್ರಾರಂಭವಾಗುತ್ತದೆ. ಒಬ್ಬ ವ್ಯಕ್ತಿ ಜೀವನದ ಪ್ರತಿಯೊಂದು ವಿಷಯದಲ್ಲೂ ಸರಿಯಾಗಿ ವ್ಯವಹರಿಸಬೇಕು. ನಿಮಗೆ ಸಂಬಂಧಿಸಿದ ಎಲ್ಲವೂ ನಿಮ್ಮನ್ನು ಆಧ್ಯಾತ್ಮಿಕಗೊಳಿಸುತ್ತದೆ. ಎಲ್ಲದರಲ್ಲಿ ಆಧ್ಯಾತ್ಮಿಕತೆ ಕಾಣಿಸುವಂತಿರಬೇಕು. ಒಬ್ಬ ಗುರುವಿನೊಂದಿಗೆ ಮಾತ್ರವಲ್ಲ ಯಾರೊಂದಿಗಾದರೂ ನೀವು ಉಪಯೋಗಿಸುವ ಧ್ವನಿ ಅದು ಮುಖ್ಯ.

ನೀವು ನನ್ನ ಬಗ್ಗೆ ಯೋಚಿಸಿದರೆ ನನ್ನ ಮತ್ತು ನನ್ನ ಚೈತನ್ಯಗಳೊಂದಿಗೆ ಮನೋಸಂಪರ್ಕ ಪಡೆಯುವಿರಿ, ಸಂಪರ್ಕದ ಗಾಢತೆಯನ್ನು ಅನುಸರಿಸಿ ಚೈತನ್ಯಗಳು ಸ್ಪಂದಿಸುತ್ತವೆ. ನೀವು ನನ್ನನ್ನು ನೋಡಬಯಸಿದರೆ, ಬಹುಶಃ ನೀವು ದರ್ಶನ ಪಡೆಯುವಿರಿ. ನೀವು ನನ್ನೊಂದಿಗೆ ಸಂಭಾಷಿಸಬಹುದು. ಇದು ಯಾರೊಂದಿಗಾದರೂ ಸಾಧ್ಯ. ಆದರೆ ನೀವು ಸ್ವಲ್ಪ ಎಚ್ಚರಿಕೆಯಿಂದ ಇರಬೇಕು ಏಕೆಂದರೆ ಕಪ್ಪು ಚೈತನ್ಯ ನನ್ನ ಹಾಗೆ ವೇಷ ಧರಿಸಬಹುದು. ನೀವು ನನ್ನೊಂದಿಗೆ ಪರೀಕ್ಷಿಸಿಕೊಳ್ಳಬಹುದು.

ನಮ್ಮ ಶರೀರ ವ್ಯವಸ್ಥೆಯಲ್ಲಿರುವ ದೇಹ, ಮನಸ್ಸು, ಬುದ್ಧಿಶಕ್ತಿಗಳು ನಮ್ಮ ಸ್ನೇಹಿತರು. ನೀವು ಬೆಳಕನ್ನು ನೋಡಬಯಸಿದರೆ ಮನಸ್ಸು ಅದನ್ನು ತೋರಿಸುತ್ತದೆ. ಆದ್ದರಿಂದ ನೀವು ಎಚ್ಚರಿಕೆಯಿಂದ ಇರಬೇಕು. ಮನಸ್ಸಿಗೆ ನೀವು ಬಲಿಯಾಗಬೇಡಿ. ಮನಸ್ಸು ನಿಮ್ಮನ್ನು ಸಂತೋಷಪಡಿಸಲು ಬಯಸುತ್ತದೆ. ಅದು ಅತಿಯಾಗಿ ಪ್ರಯತ್ನಿಸುತ್ತದೆ. ಆದ್ದರಿಂದ ಮನಸ್ಸಿನ ಮೇಲೆ ಪೂರ್ಣವಾಗಿ ಅವಲಂಬಿಸಬೇಡಿ.

ಬೆಳಕನ್ನು ಚಾನಲ್ ಮಾಡುವುದಷ್ಟೇ ಸಾಲದು. ಬೆಳಕನ್ನು ಚಾನಲ್ ಮಾಡುವವರು ಬೆಳಕು ಮತ್ತು ಬೆಳಕಿನ ಕಾರ್ಯಗಳನ್ನು ಅರಿಯಬೇಕು; ಸೂಕ್ತ ರೀತಿಯಲ್ಲಿ ಬದುಕಲು ಕಲಿಯಬೇಕು. ಯಾವುದೇ ಕರ್ತವ್ಯ ಅಥವಾ ಜವಾಬ್ದಾರಿಯನ್ನು ಎಂದಿಗೂ ಅಲಕ್ಷಿಸಬೇಡಿ.

ನಾನು 1977ರಿಂದ ಗಮನಿಸುತ್ತಿದ್ದೇನೆ, ಸಾಧ್ಯವಾದ ಕಡೆಯಲ್ಲೆಲ್ಲಾ ಜನರು ಅಧ್ಯಾತ್ಮವನ್ನು 'ಮಾರಲು' ಪ್ರಾರಂಭಿಸಿದ್ದಾರೆ. ಆಧ್ಯಾತ್ಮಿಕತೆಯ ವ್ಯಾಪಾರೀಕರಣವನ್ನು ಗಮನಿಸಿದಾಗ ನನಗೆ ಬಹಳ ವ್ಯಥೆಯಾಗುತ್ತದೆ.

ಒಬ್ಬ ವ್ಯಕ್ತಿ ಒಂದು ಪುಸ್ತಕದಿಂದ ಧ್ಯಾನ ಮಾಡುವ ತಂತ್ರವನ್ನು ತಿಳಿದು ಧ್ಯಾನ ಮಾಡಲಾರಂಭಿಸಿದರು. ಇದ್ದಕ್ಕಿದ್ದಂತೆ ಬೆಂಕಿಯ ಉರಿಯಿಂದ ಸಿಡಿಯುವ ಶಬ್ದಗಳು ತಲೆಯಲ್ಲಿ ಕೇಳಲಾರಂಭವಾಯಿತು. ಇಡೀ ವ್ಯವಸ್ಥೆಯಲ್ಲಿ ಶಾಖದ ಅನುಭವವಾಯಿತು. ಧ್ಯಾನಾಭ್ಯಾಸ ನಿಲ್ಲಿಸಲು ಅವರಿಗೆ ಹೇಳಿದೆ. ತಪ್ಪು ಅಭ್ಯಾಸದಿಂದ ಅಸ್ವಾಭಾವಿಕತೆ ಉಂಟಾಯಿತು. ಜನರು ಹಿಂದಿನ ಜನ್ಮಗಳಲ್ಲಿ ತಪ್ಪಾದುದನ್ನು ಅಭ್ಯಾಸ ಮಾಡಿದವರು ಈಗಲೂ ಕಷ್ಟಪಡುತ್ತಿದ್ದಾರೆ. ಆದ್ದರಿಂದ ಇಂತಹ ಅಭ್ಯಾಸಗಳನ್ನು ಯಾವತ್ತಿಗೂ ಮಾಡಬೇಡಿ.

8–4–2012

ವೈಯಕ್ತಿಕ ಮಾರ್ಗದರ್ಶನ ಉನ್ನತ ಸಾಧನೆಯಲ್ಲಿ ಮಾರ್ಗದರ್ಶನ ಮಾಡುವುದಕ್ಕಾಗಿಯೇ ಇದೆ. ನೀವು ನಕಾರಾತ್ಮಕಗಳನ್ನು ಹೊಂದಿದ್ದರೆ, ನೀವಿನ್ನೂ ಸಿದ್ಧರಾಗಿಲ್ಲ ಎಂದರ್ಥ. ನೀವು ತಾಳ್ಮೆಯಿಂದ ಇರಬೇಕು ಮತ್ತು ಕಾಯಬೇಕು. ಮೊದಲು ಚೆನ್ನಾಗಿ ಧ್ಯಾನ ಮಾಡಿ, ಬೆಳಕನ್ನು ಅನುಭವಿಸಿ, ಶಂಬಲದ ಎಲ್ಲ ನಿಯಮಗಳನ್ನು ಅಭ್ಯಾಸ ಮಾಡಿ, ಜ್ಞಾನವನ್ನು ಪೂರ್ಣವಾಗಿ ಹೊಂದಿರಿ, ಆಗ ನೀವು ಉನ್ನತ ಸಾಧನೆಗೆ ಸಿದ್ಧರಾಗುವಿರಿ.

ನೀವು ಆಧ್ಯಾತ್ಮಿಕವಾಗಿ ಬೆಳೆದರೆ, ಎಲ್ಲ ಕ್ಷೇತ್ರಗಳಲ್ಲಿ ನೀವು ಬೆಳೆಯುವಿರಿ, ನಿಮ್ಮ ಇಡೀ ವ್ಯಕ್ತಿತ್ವ ಪರಿಷ್ಕರಣಗೊಳ್ಳುತ್ತದೆ. ನಿಮ್ಮಿಂದ ಬರುವ ಪ್ರತಿಯೊಂದು ಶಬ್ದ ಸಂಪೂರ್ಣ ಪ್ರೀತಿಯಿಂದ ಕೂಡಿರುತ್ತದೆ. ಆಧ್ಯಾತ್ಮಿಕತೆ ಧ್ಯಾನಗಳಿಂದ ಪ್ರಾರಂಭವಾಗುವುದಿಲ್ಲ, ಆದರೆ ಜೀವನದ ಪ್ರತಿಯೊಂದು ವಿವರಗಳಲ್ಲಿ ಪ್ರಾರಂಭವಾಗುತ್ತದೆ.

ಓರಿಯಂಟೇಷನ್ ತರಗತಿಯ ಕಾಲದಲ್ಲಿ ಅನುಭವಿಸಿದ ಫೋಟಾನ್ ಬೆಲ್ಟ್‌ನ ಚೈತನ್ಯಗಳು ಕೆಲವು ಜನರಲ್ಲಿ ತಾತ್ಕಾಲಿಕವಾಗಿ ಸ್ವಲ್ಪ ಅಸ್ವಸ್ಥತೆ ಉಂಟುಮಾಡಿದವು. ಈ ಚೈತನ್ಯಗಳು ನಕಾರಾತ್ಮಕ ಗುರುತುಗಳನ್ನು ಸ್ವಲ್ಪ ಕೂಡಾ ಸಹಿಸುವುದಿಲ್ಲ. ಅವು ತಿದ್ದಲು ಪ್ರಯತ್ನಿಸುತ್ತವೆ. ಬಹುಶಃ ನಾವು ಆತ್ಮದ ನೆಲೆಯಿಂದ ಬೆಳಕನ್ನು ಆಯ್ಕೆ ಮಾಡಿಕೊಂಡಿಲ್ಲ. ಈ ಚೈತನ್ಯಗಳೆಲ್ಲ ನಮಗೆ ಸಹಾಯ ಮಾಡಲು ಬರುತ್ತವೆಯೇ ಹೊರತು ಯಾವ ರೀತಿಯಲ್ಲೂ ತೊಂದರೆ ಕೊಡುವುದಕ್ಕಲ್ಲ.

ಓರಿಯಂಟೇಷನ್ ಸೆಷನ್ ಜನರಲ್ಲಿ ಅನೇಕ ಬದಲಾವಣೆಗಳನ್ನು ತಂದಿದೆ. ಒಬ್ಬ ವ್ಯಕ್ತಿ ನಡೆಯುತ್ತಿರುವಾಗ ಒಂದು ರೀತಿಯ ಶೂನ್ಯತೆಯನ್ನು, ಆಲೋಚನಾರಹಿತ ಸ್ಥಿತಿಯನ್ನು ಬಹಳ ಕಾಲದವರೆಗೆ ಅನುಭವಿಸಿದರು. ಆಕೆ ಭೌತಿಕವಾಗಿ ಕಾರ್ಯನಿರತವಾಗಿದ್ದಾಗ ಆಕೆಯ ಜಾಗೃತಿಯು ದೇಹ, ಮನಸ್ಸು ಮತ್ತು ಬುದ್ಧಿಗಳಿಂದಾಚೆಗೆ ಉನ್ನತ ಹಂತಗಳಿಗೆ ಹೋಯಿತು. ಅದು ಆನಂದವನ್ನು ಅನುಭವಿಸುವ ಒಂದು ಸ್ಥಿತಿ. ನಮ್ಮ ಜೀವನವನ್ನು ಬದಲಿಸಲು ಇಂತಹ ಒಂದು ಅನುಭವ ಸಾಕು.

ICU ನಲ್ಲಿದ್ದ ಒಬ್ಬ ಚಿಕ್ಕ ಹುಡುಗಿ, ತನ್ನ ತಂದೆ ಅವಳನ್ನು ನೋಡಲು ಬಂದಿದ್ದಾಗ ಬಹಳ ಸಂತೋಷಪಟ್ಟಳು. ಅವರು ಮಂದಹಾಸ ಮತ್ತು ಚೈತನ್ಯಗಳಿಂದ ಕೂಡಿದ್ದರು. ಅವಳೊಂದಿಗೆ ಸ್ವಲ್ಪ ಸಮಯ ಕಳೆದ ನಂತರ ಅವರು ಹೋಗಿ ಆಕೆಯ ತಾಯಿಯನ್ನು ಕರೆತಂದರು. ಮೊದಲ ಬಾರಿಗೆ ಅವರು ಬರುತ್ತಿರುವರೆಂಬುದನ್ನು ಆಕೆ ಮನಗಂಡಳು. ಆಕೆಯ ತಂದೆಯ ಹಾಗೆ ಮೊದಲು ಬಂದಿದ್ದ ವ್ಯಕ್ತಿ ನಾನು, ಎಂದು ಆಕೆ ಭಾವಿಸಿದಳು ಅದು ನಾನೇ ಆಗಿದ್ದೆ! ಇಂತಹ ಅದ್ಭುತ ಅನುಭವಗಳು ಹೆಚ್ಚು ಜನರಿಗೆ ಆಗುವುದಿಲ್ಲ.

ಒಬ್ಬ ವ್ಯಕ್ತಿ ಉಭಯ ಸಂಕಟದಲ್ಲಿದ್ದರು. ಆಕೆ, "ನ್ಯಾಯವಲ್ಲದ ಮಾರ್ಗದಲ್ಲಿ ಅತಿ ಜಾಣ್ಮೆಯಿಂದ ನಡೆದುಕೊಳ್ಳುವ ವ್ಯಕ್ತಿಯೊಡನೆ ನಾವು ಹೇಗೆ ವ್ಯವಹರಿಸುವುದು?" ಎಂದು ಪ್ರಶ್ನಿಸಿದರು. ನಾನು ಆಕೆಗೆ ಎರಡು ನಿಯಮಗಳನ್ನು ಅನುಸರಿಸುವಂತೆ ಹೇಳಿದೆ: ಒಂದು ನಿಯಮ, ಆ ವ್ಯಕ್ತಿಯನ್ನು ದ್ವೇಷಿಸಬೇಡಿ, ಆ ವ್ಯಕ್ತಿಗೆ ಪ್ರೀತಿಯನ್ನು ಕಳುಹಿಸಿ. ಇನ್ನೊಂದು ನಿಯಮ, ಶೋಷಣೆಯನ್ನು ಅನುಮತಿಸದೇ ಇರುವುದು.

ಕೆಲವು ಜನರು ಕೇಳುತ್ತಾರೆ, "ನಾವು ಬೆಳಕಿನ ಬಗ್ಗೆ ಈಗೇಕೆ ಮಾತನಾಡುತ್ತಿದ್ದೇವೆ?" ಕಳೆದ 5000 ವರ್ಷಗಳ ಕಾಲದಲ್ಲಿ ಕಲಿಯುಗದಲ್ಲಿ ಬೆಳಕಿಗೆ ಅವಕಾಶವಿರಲಿಲ್ಲ, ಕಾರಣ ಅಂಧಕಾರಕ್ಕೆ ಹೆಚ್ಚು ಅವಕಾಶವಿತ್ತು. ಈಗ ನಾವು ಬೆಳಕಿನ ಯುಗಕ್ಕೆ ಪ್ರವೇಶಿಸುತ್ತಿದ್ದೇವೆ. ಸಹಜವಾಗಿಯೇ ನಾವು ಬೆಳಕನ್ನು ತಿಳಿಯಲೇಬೇಕು, ಬೆಳಕನ್ನು ಅನುಭವಿಸಬೇಕು ಮತ್ತು ಬೆಳಕನ್ನು ಹರಡಬೇಕು. ಹೊಸ ಚೈತನ್ಯಗಳಿಗೆ ನಾವು ಕೃತಜ್ಞತೆ ಸಲ್ಲಿಸಬೇಕು, ಏಕೆಂದರೆ ಹೊಸ ಚೈತನ್ಯಗಳಿಂದಾಗಿ ಜನರು ಜಾಗೃತಗೊಳ್ಳುತ್ತಿದ್ದಾರೆ, ಅವರು ಬೆಳಕನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳುತ್ತಿದ್ದಾರೆ ಮತ್ತು ಚಾನಲ್ ಮಾಡುತ್ತಿದ್ದಾರೆ. ಮೊದಲು ಇದು ಸಾಧ್ಯವಿರುತ್ತಿರಲಿಲ್ಲ.

15–4–2012

ಪ್ರಶ್ನೆಗಳು ಮತ್ತು ಉತ್ತರಗಳು ಸುಪರಿಚಿತವಾಗಿ ತೋರುತ್ತವೆ. ಆದರೆ ಗಮನಿಸಿ, ಪ್ರತಿ ಸಲವೂ ಉತ್ತರಕ್ಕೆ ಹೊಸ ಅಂಶವನ್ನು ಸೇರಿಸಲಾಗುತ್ತದೆ.

## ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

ಈ ಮಾರ್ಗವನ್ನರಿಯಲು, ಆಧ್ಯಾತ್ಮಿಕತೆ, ಧ್ಯಾನಗಳು ಮತ್ತು ಜೀವನಗಳನ್ನು ಅರಿಯಲು ನೀವು ನಮ್ಮ ಪುಸ್ತಕಗಳನ್ನು ಓದಬೇಕು.

ರಿಟ್ರೀಟ್ ಒಂದು ವಿಶೇಷ ಅವಕಾಶ, ಅಲ್ಲಿ ನೀವು ಹೊಸ ಹೊಸ ಪ್ರಶ್ನೆಗಳನ್ನು ಕೇಳಬಹುದು ಮತ್ತು ನಾನು ಕೂಡಾ ಹೊಸ ಜ್ಞಾನ ಪಡೆಯಲು ಪ್ರಯತ್ನಿಸಬಹುದು. ಅತ್ಯಂತ ಮುಖ್ಯ ವಿಷಯವೆಂದರೆ ಪ್ರತಿನಿತ್ಯದ ಬದುಕಿಗೆ ಬೇಕಾದ ಜ್ಞಾನ. ಇದರ ಬಗ್ಗೆ ಋಷಿಗಳಿಂದ ಸ್ಪಷ್ಟವಾದ ಸೂಚನೆಗಳಿವೆ. ರಿಟ್ರೀಟ್‌ನಲ್ಲಿ ಭಾಗವಹಿಸಲು ಬಯಸುವವರು ದಯವಿಟ್ಟು ಸಿದ್ಧರಾಗಿ ಬನ್ನಿ, ಏಕೆಂದರೆ ಈ ಸೆಶನ್‌ನ ಗುಣಮಟ್ಟ ನಿಮ್ಮ ಪ್ರಶ್ನೆಗಳನ್ನು ಅವಲಂಬಿಸಿರುತ್ತದೆ.

ನಾವು ಒಂದು ಭೂಕಂಪ, ಅಗ್ನಿ ಪರ್ವತದಿಂದ ಚಿಮ್ಮುವ ಬೆಂಕಿಯ ಹಾವಳಿ, ಚಂಡಮಾರುತ ಅಥವಾ ಸೂರ್ಯನ ಜ್ವಾಲೆಗಳ ಬಗ್ಗೆ ಕೇಳಿದಾಗ ಅದರ ಅನಾಹುತದ ಬಗ್ಗೆ ಮಾತ್ರ ಯೋಚಿಸುತ್ತೇವೆ. ಇಂಥ ಸಂದರ್ಭಗಳಲ್ಲಿ ಆಧ್ಯಾತ್ಮಿಕ ಚೈತನ್ಯಗಳು ಬಿಡುಗಡೆಯಾಗುತ್ತವೆ. ಒಳ್ಳೆಯ ಉದಾಹರಣೆ ಎಂದರೆ ಇತ್ತೀಚಿಗೆ ಆದ ಭೂಕಂಪ. ಅದು ಅಷ್ಟೊಂದು ಪ್ರಬಲವಾಗಿದ್ದರೂ ಒಬ್ಬ ವ್ಯಕ್ತಿ ಕೂಡಾ ಸಾಯಲಿಲ್ಲ. ಋಷಿಗಳು ಹೊಸ ಮತ್ತು ಪ್ರಬಲ ಚೈತನ್ಯಗಳನ್ನು ಬಿಡುಗಡೆ ಮಾಡಲು ಬಯಸಿದ್ದರು. ಆದ್ದರಿಂದ ಅವರು ಈ ಭೂಕಂಪ ಸಂಭವಿಸಲು ಅನುಮತಿಸಿದರು.

ಜನರು ಕೆಲವು ಸಲ ಪ್ರಶ್ನಿಸುತ್ತಾರೆ, “ವಿನಾಶ ಏಕೆ ಸಂಭವಿಸಬೇಕು?” ನಮ್ಮ ಸುತ್ತಲಿರುವ ಜೀವನ, ಈ ಗ್ರಹದ ಮೇಲಿನ ಜೀವನ, ಸೃಷ್ಟಿಯ ಪ್ರಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ, ಆದರೆ ಅದು ಸಾಧ್ಯವಿದೆ. ನಮ್ಮ ಪುಸ್ತಕಗಳಲ್ಲಿರುವ ಜ್ಞಾನವನ್ನು ನೀವು ಚೆನ್ನಾಗಿ ಅರ್ಥ ಮಾಡಿಕೊಂಡರೆ, ವಿನಾಶ ಕೂಡಾ ಒಂದು ಸ್ವಾಭಾವಿಕ ಪ್ರಕ್ರಿಯೆ ಎಂಬುದನ್ನು ಅರ್ಥ ಮಾಡಿಕೊಳ್ಳುವಿರಿ. ಅಲ್ಲಿ ನೋವಿದೆ, ದುಃಖವಿದೆ. ಅದು ಆಟದ ಒಂದು ಭಾಗ. ಸೃಷ್ಟಿಯಾಗಿರುವುದೆಲ್ಲ ನಾಶವಾಗಬೇಕು. ಆದ್ದರಿಂದ ಸೃಷ್ಟಿ ಮತ್ತು ವಿನಾಶಗಳ ಕಾರಣಕರ್ತನಾದ ದೇವರು ಇವುಗಳಿಂದ ವಿಚಲಿತನಾಗುವುದಿಲ್ಲ. ಇಂತಹ ಹಂತಗಳನ್ನು ನೀವೂ ಸಹ ತಲುಪಬೇಕು. ಈ ನಿಟ್ಟಿನಲ್ಲಿ ಧ್ಯಾನ ನಿಮಗೆ ಸಹಾಯ ಮಾಡುತ್ತದೆ. ಬೆಳಕು ನಿಮಗೆ ಸಹಾಯ ಮಾಡುತ್ತದೆ. ನೀವು ಹೆಚ್ಚುಹೆಚ್ಚು ಬೆಳಕನ್ನು ಅನುಭವಿಸಲು ನಾನು ಒತ್ತು ಕೊಡುತ್ತೇನೆ.

ಮಾನವನ ಸ್ವಾಭಾವಿಕ ಗುಣವೆಂದರೆ ಹಂಚಿಕೊಳ್ಳುವುದು, ವಿಶೇಷವಾಗಿ ಅಮೂಲ್ಯ ವಸ್ತುಗಳನ್ನು. ಲೈಟ್ ಚಾನಲ್‌ನಿಂದ ಮೊದಲು ಪಡೆಯುವ ಲಾಭವೆಂದರೆ ಬೆಳಕು ನಿಮ್ಮ ಮೂಲಕ ಇಡೀ ವ್ಯವಸ್ಥೆಗೆ ಪ್ರವಹಿಸಿದಂತೆ ನೀವು ಪರಿಶುದ್ಧರಾಗುವಿರಿ. ನೀವು ಅನುಮತಿಸಿದರೆ, ಬೆಳಕು ನಿಮ್ಮನ್ನು ಪರಿವರ್ತನೆ ಮಾಡುತ್ತದೆ. ಲೈಟ್ ಚಾನಲಿಂಗ್ ಒಂದು ಅದ್ಭುತ ಅಭ್ಯಾಸ. ನೀವು ಇದರ ಬಗ್ಗೆ ಬೇರೆಯವರಿಗೆ ಹೇಳಬೇಕು ಮತ್ತು ಅವರು ಬೆಳೆಯಲು ಸಹಾಯ ಮಾಡಬೇಕು. ಆದರೆ ಜನರು ಸಿದ್ಧರಿಲ್ಲದಿದ್ದರೆ ನೀವು ಅದರ ಬಗ್ಗೆ ಏನು ಮಾಡಲೂ ಸಾಧ್ಯವಿಲ್ಲ. ನೀವು ಅವರ ಬಗ್ಗೆ ವಿಷಾದ ತಾಳಬಹುದು ಅಷ್ಟೆ.

ಬೆಳಕು ನಮ್ಮ ಎಲ್ಲ ಸಮಸ್ಯೆಗಳನ್ನು ಪರಿಹರಿಸುತ್ತದೆ. ಸಮಸ್ಯೆ ಕೂಡಲೇ ಪರಿಹಾರವಾಗದಿದ್ದಾಗ ಬೆಳಕು ನಮಗೆ ಧೈರ್ಯ ಕೊಡುತ್ತದೆ ಮತ್ತು ಸಮಸ್ಯೆಯನ್ನು ಎದುರಿಸಲು ವಿವೇಕ ಕೊಡುತ್ತದೆ. ಸಮಸ್ಯೆ ಕ್ರಮೇಣ ಮಾಯವಾಗುತ್ತದೆ. ಬೆಳಕು ನಮ್ಮೆಲ್ಲ ಸಮಸ್ಯೆಗಳನ್ನು ಪರಿಹರಿಸುತ್ತದೆ, ಆದರೆ ಆತ್ಮದ ಹಂತದಿಂದ ಬೆಳಕನ್ನು ಆಯ್ಕೆ ಮಾಡಿದರೆ ಮಾತ್ರ. ನೀವು ನಿಜವಾಗಿ ಬೆಳಕನ್ನು ಆಯ್ಕೆ ಮಾಡಿದರೆ ಬೆಳಕು ಎಲ್ಲವನ್ನೂ ನಿರ್ವಹಿಸುತ್ತದೆ.

ನಮಗೆ ಪರಿಚಯವಿರದ, ಧ್ಯಾನಿಯಲ್ಲದವರೊಬ್ಬರು ‘ಶಂಬಲ ನಿಯಮಗಳ ಅಭ್ಯಾಸ’ ಪುಸ್ತಕವನ್ನು ಓದಿದರು. ಅವರು ಕಲ್ಕಿಯನ್ನು ಭೇಟಿ ಮಾಡಲು ಬಯಸಿ, ಶಂಬಲಕ್ಕೆ ಸೂಕ್ಷ್ಮ ಪ್ರಯಾಣ ಮಾಡುವುದನ್ನು ಅಭ್ಯಾಸ ಮಾಡಿದೆ, ಆದರೆ ಆ ದಿನದಿಂದ ಅವರ ಸುತ್ತ ಪ್ರೇತಾತ್ಮ ಇರುವಂತೆ ಭಾಸವಾಗುತ್ತಿದೆ, ನನಗೆ ದಯವಿಟ್ಟು ಸಹಾಯ ಮಾಡಿ, ಎಂದು ಪತ್ರ ಬರೆದರು. ನಾನು ಸೂಕ್ಷ್ಮ ಪ್ರಯಾಣವನ್ನು ಏಕೆ ಅಭ್ಯಾಸ ಮಾಡಿದಿರಿ ಎಂದು ಪ್ರಶ್ನಿಸಿದೆ. ಅವರು, ಪುಸ್ತಕದಲ್ಲಿ ಸೂಕ್ಷ್ಮ ಪ್ರಯಾಣ ಮಾಡಬಾರದೆಂಬ ಎಚ್ಚರಿಕೆ ಎಲ್ಲಿಯೂ ಇಲ್ಲ, ಎಂದರು. ನಾನು ಸೂಕ್ಷ್ಮ ಪ್ರಯಾಣ ಮಾಡಬೇಕೆಂಬುದರ ಸಲಹೆ ಇಲ್ಲವೆಂದು ತಿಳಿಸಿದೆ. ನೀವು ಶಂಬಲಕ್ಕೆ ಸೂಕ್ಷ್ಮ ಪ್ರಯಾಣ ಮಾಡಬೇಕೆಂದು ನಾನು ಎಲ್ಲೂ ಹೇಳಿಲ್ಲ.

22–04–2012

ನಾವು 2012 ರ ಕೊನೆಯನ್ನು ತಲುಪುವವರೆಗೆ ನಾವು ಸಹಜ ಮನುಷ್ಯರಂತೆ ಬದುಕಬೇಕು. ಯಾವ ಬದಲಾವಣೆಗಳನ್ನೂ ಮಾಡಬೇಡಿ. ಧ್ಯಾನಿಸಿ ಮತ್ತು ಸಕಾರಾತ್ಮಕವಾಗಿ. ಅಷ್ಟು ಸಿದ್ಧತೆ ಸಾಕು. ಆಧ್ಯಾತ್ಮಿಕತೆ ಎಂದರೆ ಒಳ್ಳೆಯವರಾಗಿರುವುದು, ಪ್ರಾಮಾಣಿಕರಾಗಿರುವುದು ಮತ್ತು ಶಾಂತಿಯಿಂದಿರುವುದು ಎಂಬುದಾಗಿ ಅರ್ಥ ಮಾಡಿಕೊಳ್ಳಿ. ನೀವು ಸಿದ್ಧರಾಗದಿದ್ದರೆ ಮತ್ತು ಕೇವಲ ಸಾಮಾನ್ಯ ಜೀವನ ಮುಂದುವರಿಸಿದರೆ ಬಹುಶಃ ನೀವು ಕಷ್ಟಗಳನ್ನು ಎದುರಿಸಬೇಕಾಗುವುದು. ನಮ್ಮಲ್ಲಿ ಪ್ರತಿಯೊಬ್ಬರೂ 2012ರ ಘಟನೆಗಳಿಂದ ಪಾರಾಗಬಹುದು ಮತ್ತು ಪಾರಾಗಬೇಕು, ಏಕೆಂದರೆ ಇದರ ನಂತರದ ಯುಗ ಉಜ್ವಲವಾದುದು.

ಹಿಮಾಲಯಕ್ಕೆ ಹೋಗುವುದಕ್ಕೆ, ಜೀವನದಿಂದ ವಿಮುಖರಾಗುವುದಕ್ಕೆ ನಾವು ಎಂದೂ ಪ್ರೋತ್ಸಾಹಿಸುವುದಿಲ್ಲ. ನೀವು ಎಲ್ಲಿ ಇರುವಿರೋ ಅಲ್ಲಿಯೇ ಇರಿ. ನಮ್ಮ ಆರ್ಥಿಕ ಸ್ಥಿತಿ ಹೇಗೇ ಇರಲಿ, ಈ ಜೀವನವನ್ನು ಸರಿಯಾಗಿ, ಅರ್ಥಪೂರ್ಣವಾಗಿ ಬದುಕಬೇಕು. ಇದನ್ನು ಮಾಡದಿದ್ದರೆ, ಋಷಿಗಳು ನಮ್ಮಲ್ಲಿಟ್ಟಿರುವ ನಂಬಿಕೆಗೆ ದ್ರೋಹ ಮಾಡಿದಂತಾಗುತ್ತದೆ. ಸರಳ ಮತ್ತು ಶಾಂತಿಯುತ ಜೀವನವನ್ನು ನಾವು ಅನಗತ್ಯವಾಗಿ ಅಸ್ತವ್ಯಸ್ತಗೊಳಿಸುತ್ತೇವೆ.

ನಮ್ಮಲ್ಲಿರುವ ಮಾನವೀಯ ಭಾಗ ಅತ್ಯಂತ ಅಮೂಲ್ಯವಾದುದು. ನಿಮ್ಮ ಹೃದಯದಿಂದ ಇನ್ನೊಬ್ಬ ವ್ಯಕ್ತಿಯೊಡನೆ ಸಂಬಂಧ ಕೂಡಿಸುವುದರಲ್ಲಿ ಅಂಥ ಸೌಂದರ್ಯವಿದೆ. ನಮಗೆ ಮತ್ತು ನಮ್ಮ ಕುಟುಂಬಕ್ಕೆ ಮಾತ್ರ ಕಾಳಜಿ ಇದ್ದರೆ ಸಾಲದು, ನಮ್ಮ ದೇಶ ಮತ್ತು ಇಡೀ ಪ್ರಪಂಚದ ಬಗ್ಗೆ ಕಾಳಜಿ ಇರಬೇಕು. ಬೆಳಕನ್ನು ಚಾನಲ್ ಮಾಡಿ. ನಾವು ಈ ಮಾನವೀಯ ಭಾಗವನ್ನು ಧ್ಯಾನ ಮಾಡುವುದಕ್ಕೆ ಅಥವಾ ಇನ್ನೊಬ್ಬರೊಡನೆ ಸಂಬಂಧ ಬೆಳೆಸುವುದಕ್ಕೆ ಅಥವಾ ವಿಶ್ವದ ವ್ಯಕ್ತಿಯಾಗಿ ಇರುವುದಕ್ಕೆ ಅಡ್ಡಿ ಬರದಂತೆ ನೋಡಿಕೊಳ್ಳಬೇಕು. ಮಾನವೀಯ ಭಾಗವನ್ನು ಅನುಭವಿಸಿ, ಅದನ್ನು ಜೀವಂತವಾಗಿಡಿ ಮತ್ತು ವಿಶ್ವಾತ್ಮಕತೆಗೆ ತೆರೆದ ಬಾಗಿಲನ್ನಾಗಿ ಮಾಡಿಕೊಳ್ಳಿ, ಅಡಚಣೆಯಾಗಿ ಅಲ್ಲ.

ಧ್ಯಾನದ ಉದ್ದೇಶ ಮೌನವಾಗಿರುವುದು, ನಿಶ್ಚಲತೆಯ ಸಾಗರವನ್ನು ತಲುಪುವುದು ಮತ್ತು ವಿಸ್ತರಿಸುವುದು. ಆದರೆ ನೀವು ಒಂದ ಧ್ವನಿ ಮುದ್ರಣವನ್ನು ಕೇಳಿ ನಿರ್ದೇಶಿತ ಧ್ಯಾನವನ್ನು ಅನುಸರಿಸಿ ಧ್ಯಾನಾಭ್ಯಾಸ ಮಾಡಿದರೆ ನೀವು ಕೇವಲ ಅದೇ ಹಂತದಲ್ಲಿ ಉಳಿಯುವಿರಿ. ನೀವು ಮಂತ್ರ, ಮನಸ್ಸುಗಳಿಂದ ಆಚೆಗೆ ಹೋಗುವುದಿಲ್ಲ. ಇದನ್ನು ಮೊದಲು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಿ.

ಓರಿಯಂಟೇಷನ್ ತರಗತಿಗಳು ವೆಬ್‌ಕಾಸ್ಟ್ ಆಗಿವೆ. ಅದು ದಾಖಲಾತಿ ಮಾಡಿದ ಜನರಿಗಾಗಿ ಮೀಸಲಾಗಿತ್ತು. ಆದರೆ ಈ ತಂತ್ರವಿಧಾನಗಳನ್ನು ಕೆಲವರು ಬೇರೆಯವರಿಗೆ ತಿಳಿಸಿದ್ದಾರೆ. ಈ ತಂತ್ರಗಳನ್ನು ಹಂಚಿಕೊಂಡ ಜನರು ಆ ದಿನ ಅಭ್ಯಾಸ ಮಾಡಿದ್ದರಿಂದ ಗಳಿಸಿದ ಪ್ರಯೋಜನಗಳನ್ನು ಕಳೆದುಕೊಂಡರು. ಅಭ್ಯಾಸ ಮಾಡಿದ ಇತರರು ಕೂಡಾ ಪ್ರಯೋಜನಗಳನ್ನು ಪಡೆಯುವುದಿಲ್ಲ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 2000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1000/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

## ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಗುರೂಜಿಯವರಿಗೆ ಬರೆದ ಪತ್ರಗಳ ಆಯ್ದ ಭಾಗಗಳು

(ಸಂ: ಶೋಭಾ ಕೆ. ರಾವ್; ಅನು: ಸುಧಾಕರ್)

ಪೂರ್ಣವಾಗಿ ಅಲ್ಲದಿದ್ದರೂ, ಖಂಡಿತವಾಗಿ ಒಂದು ರೀತಿಯ ನಿರ್ಲಿಪ್ತತೆ ಇದೆ. ಜೀವನದ ತಾತ್ಕಾಲಿಕತೆಯ ಬಗ್ಗೆ ಆಳವಾದ ತಿಳಿವಳಿಕೆ ಇದೆ. ಈ ಭೂಮಿಗೆ ನಾನೊಬ್ಬಳು ಪ್ರವಾಸಿ ಮಾತ್ರ ಎಂದು ಬಹಳಷ್ಟು ಬಾರಿ ನನಗನ್ನಿಸುತ್ತದೆ. ಆದ್ದರಿಂದ ಪ್ರತಿಯೊಂದನ್ನೂ, ಪ್ರತಿಯೊಂದು ಘಟನೆಯನ್ನೂ ದೂರದಿಂದ ಗಮನಿಸಬಲ್ಲವಳಾಗಿದ್ದೇನೆ.

– ಶಾಂತಾಕುಮಾರಿ ಹೆಚ್. ಎಸ್.

ನಾನು ಗರ್ಭಿಣಿಯಾಗಿದ್ದಾಗ ಸುಮಾರು 7 ತಿಂಗಳುಗಳು ಲೈಟ್ ಚಾನಲಿಂಗ್ ಕಾರ್ಯದಲ್ಲಿ ನಿರತಳಾಗಿದ್ದೆ. ಆಗೆಲ್ಲ ತಪ್ಪದೆ ಮಗುವಿಗೂ ಲೈಟ್ ಚಾನಲ್ ಮಾಡುತ್ತಿದ್ದೆ. ಗರ್ಭದಲ್ಲಿದ್ದ ಮಗುವಿನ ಜೊತೆಯಲ್ಲಿ ನಿಮ್ಮ ಮತ್ತು ತಪೋನಗರದ ಬಗ್ಗೆ ಮಾತನಾಡುತ್ತಿದ್ದೆ. ಆಕೆ ಹುಟ್ಟಿದ ನಂತರ, ಈಗ ನಾನು 'ಗುರೂಜಿ' ಎಂದಾಕ್ಷಣ ನಗುತ್ತಾಳೆ ಮತ್ತು ಸ್ಪಂದಿಸುತ್ತಾಳೆ. ಹಾಗೆಯೇ ನಾನು ಲೈಟ್ ಚಾನಲಿಂಗ್ ಬಗ್ಗೆ ಮಾತನಾಡಿದಾಗ ಸ್ಪಂದಿಸುತ್ತಾಳೆ ಮತ್ತು ತನ್ನ ಮುಖಭಾವದ ಮುಖಾಂತರ ಅದು ತನಗಾಗಲೇ ಗೊತ್ತು ಎಂದು ತಿಳಿಸುತ್ತಾಳೆ!

– ಕರುಣಾ ಮುರಾರಿ

ತುಂಬ ಚೆನ್ನಾಗಿ ಮೂಡಿಬರುತ್ತಿರುವ ವೆಬ್‌ಕಾಸ್ಟ್‌ಗಾಗಿ ಧನ್ಯವಾದಗಳು. ಪ್ರತಿವಾರವೂ ನಿಮ್ಮನ್ನು ಆಲಿಸುವುದರಿಂದ ನಿಧಾನವಾಗಿ, ಅತ್ಯಾವಶ್ಯಕವಾಗಿ ಬೇಕಾದ ಪ್ರಾಥಮಿಕ ಅಂಶಗಳು, ಬೋಧನೆಗಳು ಮತ್ತು ಸಂದೇಶಗಳನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತಿದೆ. 'ಆದ್ಯತೆ ನೀಡುವಿಕೆ'ಯಂಥ ಸರಳ ಸಂದೇಶಗಳು ಕೂಡ, ಅವುಗಳ ಮಹತ್ವವನ್ನು ಗುರುತಿಸುವುದು ಮತ್ತು ಜೀವನದಲ್ಲಿ ಅವನ್ನು ಆಚರಿಸಬೇಕಾಗಿ ಬಂದಾಗ ಕಷ್ಟವೆನಿಸುತ್ತದೆ.

– ಲಿನ್ ಕರಟಾನಿ

ಕೆಲವು ತಿಂಗಳುಗಳಿಂದ ನನ್ನ ಸಂಸಾರದ ಕೆಲವು ಕರ್ತವ್ಯಗಳ ನಿರ್ವಹಣೆಯನ್ನು ಹಲವಾರು ಕಾರಣಗಳನ್ನು ಹೇಳುತ್ತ ತಪ್ಪಿಸಿಕೊಳ್ಳುತ್ತಿದ್ದೆ. ಯಾವುದೇ ಸನ್ನಿವೇಶಕ್ಕೂ ಅಸಮಾಧಾನ ತೋರದಿದ್ದರೆ ಕೆಲಸ ಮಾಡುವುದು ಸುಲಭ ಎಂದು ಅರಿತುಕೊಂಡಿದ್ದೇನೆ. ಈಗ ಯಾವುದೇ ಕೆಲಸ ಕಷ್ಟವೆನಿಸುವುದಿಲ್ಲ. ಈಚೆಗೆ 'ದೇವರಿಗೆ ಶರಣಾಗುವುದು' ಮತ್ತು 'ಯಾವುದೇ ನಿರೀಕ್ಷೆಗಳು ಬೇಡ' ಎಂಬುದರ ನಿಜವಾದ ಅರ್ಥವನ್ನೂ ಕೂಡ ತಿಳಿದುಕೊಂಡೆ. ನನ್ನಲ್ಲಿ ಮತ್ತೊಮ್ಮೆ ಸಕಾರಾತ್ಮಕ ಚೈತನ್ಯಗಳು ತುಂಬಿರುವುದು ಗೊತ್ತಾಗುತ್ತಿದೆ.

– ಕವಿತ ಮಂಜುನಾಥ್

ನಾನು ಈಗ ಬಹಳಷ್ಟು ಸೌಮ್ಯವಾಗಿದ್ದೇನೆ, ಎಲ್ಲರನ್ನೂ ಪ್ರೀತಿಸುತ್ತೇನೆ. ನನ್ನನ್ನು ಇಷ್ಟಪಡದವರೂ ಸೇರಿದಂತೆ ಎಲ್ಲರಿಗೂ ಬೆಳಕು ಮತ್ತು ಪ್ರೀತಿಯನ್ನು ಕಳಿಸಲು ಸಾಧ್ಯವಾಗುತ್ತಿದೆ. ಎಲ್ಲವೂ ದೇವರ ಆಟ ಎಂಬುದನ್ನು ಅರ್ಥಮಾಡಿಕೊಂಡಿದ್ದೇನೆ ಮತ್ತು ದೇವರಿಗೆ ಶರಣಾಗುವುದು ಸುಲಭವೆನಿಸುತ್ತಿದೆ. ಎಲ್ಲದರಲ್ಲೂ ದೇವರನ್ನು ಕಾಣುತ್ತಿದ್ದೇನೆ ಮತ್ತು ಅನುಭವಿಸುತ್ತಿದ್ದೇನೆ. ನನ್ನ ಜೀವನದ ಕಳೆದ ಕೆಲವು ವಾರಗಳು ಅತ್ಯಾಶ್ಚರ್ಯಕರವಾಗಿವೆ.

– ಜಗದೀಶ್ ಹಿರೇಮಠ್

ಒಂದು ಮಟ್ಟದಲ್ಲಿ ನಾನಾಗಲೇ ಆತ್ಮ ಎಂದು ತಿಳಿದಿದೆ. ಇನ್ನೊಂದು ಮಟ್ಟದಲ್ಲಿ, ನಾನು ಅರಿತುಕೊಳ್ಳುವುದು ಮತ್ತು ಅನುಭವಿಸುವುದು ಬಹಳವಿದೆ ಎಂಬ ಅರಿವಿದೆ. ಬೆಳಕಿನ ಯುಗದ ಮಾಸ್ಟರ್‌ಗಳು ನನ್ನೊಳಗಿರುವ ಪುರಾತನವಾದುದೇನಕ್ಕೋ ಸಂಪರ್ಕ ಕಲ್ಪಿಸಿಕೊಟ್ಟಿದ್ದಾರೆ. ಋಷಿ–ಮಾರ್ಗದ ಪ್ರಮಾಣಗಳು, ವಿಸ್ತಾರತೆ ಮತ್ತು ಸಂತೋಷವನ್ನು ತಂದುಕೊಟ್ಟಿವೆ. ಬೆಳಕಿನ ಮಾಸ್ಟರ್‌ಗಳ ಜೊತೆ ಇರುವುದಕ್ಕೆ ಹಸಿರು ನಿಶಾನೆಯನ್ನು ಹಿಂದೆಂದೂ ಗುರುತಿಸಿರಲಿಲ್ಲ; ಇಷ್ಟೊಂದು ಸಂತೃಪ್ತಿಯ ಅನುಭವವಾಗಿರಲಿಲ್ಲ. ಮಿಕ್ಕೆಲ್ಲವೂ ಈ ಅನುಭವಕ್ಕೆ ಸಿದ್ಧತೆಯಾಗಿವೆ.

– ಮಾರ್ಸಿಯ ಸ್ಟೋವ್

ಲೈಟ್ ಚಾನಲಿಂಗ್ ಆದನಂತರ ಒಬ್ಬ ಚಿಕ್ಕ ಹುಡುಗಿ ದೊಡ್ಡ ನಗುವಿನೊಂದಿಗೆ ನನ್ನ ಬಳಿಗೆ ಬಂದು ಚಾಕ್ಲೇಟ್ ಕೊಟ್ಟಾಗ, ನನ್ನ ಹೃದಯ ತುಂಬಿಬಂತು. ಅಂದು ಆಕೆಯ ಹುಟ್ಟುಹಬ್ಬವಾಗಿರಲಿಲ್ಲ. ಆದ್ದರಿಂದ ಆ ಚಾಕ್ಲೇಟನ್ನು ಆಕೆ ತನಗಾಗಿಯೇ ಉಳಿಸಿಕೊಂಡಿರಬೇಕು, ಆದರೆ ಅದನ್ನು ನನಗೆ ಕೊಡುವಷ್ಟು ಹೃದಯ ವೈಶಾಲ್ಯತೆ ಆಕೆಯಲ್ಲಿತ್ತು. ಆಕೆ ಧನ್ಯವಾದಗಳನ್ನು ಹೇಳಿದ ರೀತಿ ಹೃದಯಸ್ಪರ್ಶಿಯಾಗಿತ್ತು. ಅಂಥ ಹೊಳೆಯುವ ಆತ್ಮಗಳಿಂದ ಸವಿಯಾದ ಉಡುಗೊರೆಗಳನ್ನು ಪಡೆಯಲು ಲೈಟ್ ಚಾನಲಿಂಗ್ ಮಾತ್ರ ಸಹಾಯಮಾಡುತ್ತದೆ. ಇಂಥ ಅವಕಾಶ ಕಲ್ಪಿಸಿಕೊಟ್ಟ ನಿಮಗೆ ಧನ್ಯವಾದಗಳು ಗುರೂಜಿ.

– ಪದ್ಮಜಾ ಬಾಲಾಜಿ

ಓರಿಯಂಟೇಷನ್ ತರಗತಿಯಲ್ಲಿ ಭಾಗವಹಿಸಿದ ನಂತರ ನನ್ನಲ್ಲಿ ಬಹಳ ಸಕಾರಾತ್ಮಕ ಬದಲಾವಣೆಗಳಾಗಿವೆ. ಈಗ, ಧ್ಯಾನಮಾಡಲು ನನಗೆ ಇಷ್ಟವಾಗುತ್ತಿದೆ. ನಾನು ಕಣ್ಣುಮುಚ್ಚಿದಾಗ ನಾನೊಂದು ಚುಕ್ಕಿ ಅಷ್ಟೆ ಅನ್ನಿಸುತ್ತದೆ ಮತ್ತು ನನ್ನ ದೇಹ ಬೆಳಕನ್ನು ಅನುಭವಿಸುತ್ತದೆ. ತಿನಿಸುಗಳಿಗಾಗಿ ಹಾತೊರೆಯುವುದು ನಿಂತಿದೆ. ಮನಸ್ಸಿನ ತಳಮಳ ಮಾಯವಾಗಿದೆ. ದೇಹ ಮತ್ತು ಮನಸ್ಸು ಹಗುರವಾಗಿದೆ. ಇದೆಲ್ಲಕ್ಕಾಗಿ ನಿಮಗೆ ತುಂಬ ಧನ್ಯವಾದಗಳು.

– ಚೆಲ್ಲ ಸುಭದ್ರ

## ಬೆಳಕಿನಿಂದ ಕ್ರಾಂತಿ ಸಮಾವೇಶದ ಬಗ್ಗೆ ಪ್ರತಿಕ್ರಿಯೆಗಳು

ಸಂಗ್ರಹ: ಜಯಂತ್ ದೇಶ್‌ಪಾಂಡೆ; ಅನು: ಶ್ಯಾಮಲಾದೇವಿ

ನಾನು ಯಾವ ರೀತಿಯಲ್ಲೂ ಬೆಳಕಿನ ಸಮಾವೇಶದ ಬಗ್ಗೆ ನೆನಪಿಟ್ಟುಕೊಂಡಿರಲಿಲ್ಲ, ಆದರೆ ಸಮಾವೇಶ ಪ್ರಾರಂಭವಾಗುತ್ತಿದ್ದಂತೆಯೇ, ದೈವಾನುಗ್ರಹದಿಂದ ಆ ಸಮಯಕ್ಕೆ ಸರಿಯಾಗಿ ನನಗೆ ನೆನಪಾಯಿತು. ಅದೊಂದು ಸುಂದರವಾದ ಅನುಭವವಾಗಿತ್ತು. ಇಡೀ ಮಾನವಜನಾಂಗದ ಒಳಿತಿಗಾಗಿ, ಪ್ರತಿದಿನ ಬೆಳಕನ್ನು ಚಾನಲ್ ಮಾಡುವುದನ್ನು ಮುಂದುವರಿಸುತ್ತೇನೆ.

– ಪ್ಯಾಟ್ರೀಸಿಯಾ ಫ್ಯೇಜ್

ಸಮಾವೇಶದ ನೇರಪ್ರಸಾರವನ್ನು ವೀಕ್ಷಿಸಲು ಸಾಧ್ಯವಾದುದಕ್ಕೆ ನನಗೆ ತುಂಬ ಸಂತೋಷವಾಗಿದೆ ಮತ್ತು ನಾನು ಅದೃಷ್ಟಶಾಲಿ ಎನಿಸುತ್ತಿದೆ. ಗುರೂಜಿ ಕೃಷ್ಣಾನಂದರು ಎಂಥ ಕರುಣಾಮಯಿ, ವಿನೀತ ಮತ್ತು ಶಾಂತಿಪೂರ್ಣ ವ್ಯಕ್ತಿ! ಈಗಿನ ಯುದ್ಧಗಳ ಸಮಯದಲ್ಲಿ, ದೇಶ ದೇಶಗಳ ನಡುವೆ ಇರುವ ದ್ವೇಷ, ಧರ್ಮ ಧರ್ಮಗಳ ನಡುವೆ ಇರುವ ದ್ವೇಷ, ಆತಂಕ ಮತ್ತು ಅನಿಶ್ಚಿತ ಜೀವನದ ಸಮಯದಲ್ಲಿ, ಅವರ ಸಂದೇಶ ಬಹಳ ಮುಖ್ಯವಾಗಿದೆ.

ರೋಮನ್ ಕ್ಯಾಥೊಲಿಕ್ ಹಿನ್ನೆಲೆಯಿಂದ ಬಂದ ನನಗೆ, ಪ್ರಪಂಚದಾದ್ಯಂತ ಹರಡುತ್ತಿರುವ ಬೆಳಕಿನ ಕ್ರಾಂತಿಯಲ್ಲಿ ಪಾಲ್ಗೊಳ್ಳಲು ನಾನು ನನ್ನ ನಂಬಿಕೆಗಳನ್ನು ಬಿಡಬೇಕೆಂದು ಒಮ್ಮೆಯೂ ಅನ್ನಿಸಲಿಲ್ಲ. ವೆಬ್‌ಕಾಸ್ಟ್ ವೀಕ್ಷಿಸುತ್ತಿದ್ದವರಲ್ಲಿ, ಕೇಳುತ್ತಿದ್ದವರಲ್ಲಿ ವಿವಿಧ ಧರ್ಮಗಳ ಜನರು ಇದ್ದಿರಬಹುದು. ಗುರೂಜಿ ಕೃಷ್ಣಾನಂದರು ತಮ್ಮ ಉಪನ್ಯಾಸದ ಮಧ್ಯೆ ಧಾರ್ಮಿಕ ಸಿದ್ಧಾಂತಗಳನ್ನು ತರಲಿಲ್ಲ. ನಾವೆಲ್ಲರೂ ನಮ್ಮನಮ್ಮ ನೆಲೆಗಟ್ಟಿನಲ್ಲಿ ಸಹಜವಾಗಿ ಜೀವಿಸುವುದರ ಜೊತೆಗೆ ಒಂದು ಸರಳವಾದ ಧ್ಯಾನತಂತ್ರವನ್ನು ಅನುಸರಿಸುತ್ತ ಬೆಳಕಿನ ಶಕ್ತಿಯನ್ನು (ದೇವರು) ವಿಶ್ವದೆಲ್ಲೆಡೆ ಹರಡಬಹುದು.

– ಲುಆನ್ ಡಿಲುಕ

ಅದೊಂದು ಅತ್ಯಂತ ಅಮೋಘವಾದ ಸಮಾವೇಶವಾಗಿತ್ತು! ಅಮೆರಿಕಾದಿಂದ ಈ ಸಮಾವೇಶದಲ್ಲಿ ಭಾಗವಹಿಸಲು ಸಾಧ್ಯವಾದುದಕ್ಕೆ, ನಾನು ಅದೃಷ್ಟಶಾಲಿ. ನಾವು ಪ್ರಪಂಚದ ಯಾವುದೇ ಭಾಗದಲ್ಲಿದ್ದರೂ, ಪ್ರತಿಯೊಬ್ಬರೂ ಇದರಲ್ಲಿ ಭಾಗವಹಿಸುವುದನ್ನು ಸಾಧ್ಯವಾಗಿಸಿದ ನಿಮಗೆಲ್ಲರಿಗೂ ಧನ್ಯವಾದಗಳು.

– ಲಿಂಡಾ ಡಿರ್ಕ್ಸ್ ಸಾಯರ್

ಜಾಗತಿಕ ಮಟ್ಟದ ಆಧ್ಯಾತ್ಮಿಕ ಪರಿವರ್ತನೆಯ ಈ ಸಮಯದಲ್ಲಿ, ಇದಕ್ಕೆ ಶ್ರುತಿಗೂಡಿ, ಗುರೂಜಿಯವರ ಸಂದೇಶವನ್ನು ನಿಮ್ಮೆಲ್ಲರೊಂದಿಗೆ ಆಲಿಸಲು ಸಾಧ್ಯವಾದುದಕ್ಕೆ ನಾನು ಅದೃಷ್ಟಶಾಲಿ ಎಂದೆನಿಸುತ್ತಿದೆ. ಅವರ ಸಂದೇಶ ಬಹಳ ಮುಖ್ಯವಾದುದು ಮತ್ತು ಸ್ಫೂರ್ತಿದಾಯಕವಾದುದು. ಅವಶ್ಯಕತೆ ಬಂದರೆ, ಸಹಾಯಕ್ಕಾಗಿ ಋಷಿಗಳಲ್ಲಿ ಪ್ರಾರ್ಥಿಸುತ್ತೇನೆ.

– ಗ್ವಾನ್ ಜಾಕೋಬ್

ಮಿಲಿಯಾಂತರ ಜನರೊಂದಿಗೆ ಬೆಳಕನ್ನು ಚಾನಲ್ ಮಾಡಿದಮೇಲೆ ಹೊಸಚೈತನ್ಯ ಮೂಡಿದೆ. ಈ ತೃಪ್ತಿಗಾಗಿ ನಿಮಗೆ ಧನ್ಯವಾದಗಳು ಗುರೂಜಿ.

– ಪೂಜಾಶ್ರೀ ರಮೇಶ

ಸಾಮೂಹಿಕ ಚಾನಲಿಂಗ್ ಚೈತನ್ಯದಾಯಕವಾಗಿತ್ತು. ಕಣಕಣದಲ್ಲೂ ಬೆಳಕಿನ ಕಂಪನಗಳನ್ನು ನಾನನುಭವಿಸಿದೆ.

– ಪ್ರದೀಪ್ ಕುಮಾರ್

ನಿಮ್ಮ ಮಾರ್ಗದ ಬಗ್ಗೆ ಈವರೆಗೆ ನನಗೆ ತಿಳಿದಿರಲಿಲ್ಲ. ಬೆಳಕಿನ ಕಾರ್ಯಕರ್ತರು ಪ್ರಪಂಚದಾದ್ಯಂತ ಅಲ್ಲಲ್ಲಿ ಇದ್ದಾರೆ ಎಂದು ನನಗೆ ಗೊತ್ತಿತ್ತು. ನಾನು ನಿಮ್ಮೊಂದಿಗೆ ಸಂಪರ್ಕಹೊಂದಿದ್ದಕ್ಕಾಗಿ ಬಹಳ ಸಂತೋಷವೆನಿಸುತ್ತದೆ.

– ಮೋನಾರ್ ಗ್ರೈ

ಬೆಳಕಿನಿಂದ ಕ್ರಾಂತಿ ಸಮಾವೇಶ ನನ್ನ ಜೀವನದಲ್ಲಿ ಸಂಭವಿಸಿರುವ ಅತ್ಯದ್ಭುತ ಘಟನೆಗಳಲ್ಲಿ ಒಂದು. ನಿಮ್ಮ ಭಾಷಣ ಅತ್ಯಂತ ಸ್ಫೂರ್ತಿದಾಯಕವಾಗಿತ್ತು ಮತ್ತು ಪರಿಪೂರ್ಣವಾಗಿತ್ತು. ಸಮಾವೇಶದಲ್ಲಿ ಉಪಸ್ಥಿತರಿದ್ದ ಮತ್ತು ವೆಬ್‌ಕಾಸ್ಟ್ ವೀಕ್ಷಿಸಿದ ನನ್ನ ಕೆಲವು ಸಹೋದ್ಯೋಗಿಗಳು ಮತ್ತು ಸ್ನೇಹಿತರು, ಅದು ಬಹಳ ಚೆನ್ನಾಗಿತ್ತು ಮತ್ತು ಸ್ಫೂರ್ತಿದಾಯಕವಾಗಿತ್ತು, ಎಂದು ಹೇಳಿದರು.

– ಪ್ರವೀಣ್ ಪಿ.ಬಿ.

ನಾವು ಬೆಳಕಿನಿಂದ ಕ್ರಾಂತಿ ಸಮಾವೇಶದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ನಿಮಗೆ ಕೃತಜ್ಞ. ನನ್ನ ಅನೇಕ ಸ್ನೇಹಿತರು, ಪರಿಚಿತರು ಮತ್ತು ನನ್ನ ಕುಟುಂಬದವರೆಲ್ಲರೂ ಸೇರಿ ಬೆಳಕನ್ನು ಚಾನಲ್ ಮಾಡಿದೆವು.

ವೆಬ್‌ಕಾಸ್ಟ್ ತಂಡಕ್ಕೆ ಧನ್ಯವಾದಗಳು. ನಾನು ಸಮಾವೇಶದಲ್ಲೇ ಇದ್ದೇನೋ ಎನಿಸಿತು. ಹನಿಗೂಡಿದ ಕಣ್ಣುಗಳೊಂದಿಗೆ, 'ಗುರೂಜಿ, ನಿಮಗೆ ಮತ್ತು ಋಷಿಗಳಿಗೆ ಧನ್ಯವಾದಗಳು. ಈಗ ನನ್ನ ಜೀವನ ಸಾರ್ಥಕವಾಯಿತು!' ಎಂದಷ್ಟೇ ನಾನು ಹೇಳಬಲ್ಲೆ.

– ವಿಶ್ವಾಸ್ ದೀಕ್ಷಿತ್

ಆಸ್ಟ್ರೇಲಿಯಾದ ಮೆಲ್ಬೋರ್ನ್‌ನಲ್ಲಿ ಸಂಜೆ 7.45 ಕ್ಕೆ ಸರಿಯಾಗಿ, 15 ನಿಮಿಷ ಬೆಳಕನ್ನು ಚಾನಲ್ ಮಾಡುವುದರ ಮುಖಾಂತರ ನಾವು ಸಂಚಲನದಲ್ಲಿ ಭಾಗವಹಿಸಿದೆವು. ನಮ್ಮ ಜೀವನದಲ್ಲಿ ಹಿಂದೆಂದೂ 15 ನಿಮಿಷಗಳು ಅಷ್ಟು ಬೇಗ ಸರಿದಿರಲಿಲ್ಲ!

– ಮಕರಂದ್

ಬೆಳಕಿನ ಪ್ರೀತಿಯ ಪ್ರಕಟಣೆ ಮತ್ತು ಅಭಿವ್ಯಕ್ತಿಗಳಿಗೆ ಕೃತಜ್ಞತೆಗಳನ್ನು ಅರ್ಪಿಸುವುದು ಹೇಗೆ? ನಾನೂ ಅದರ ಒಂದು ಭಾಗವಾಗಿದ್ದೇನೆ ಎಂಬ ಅರಿವು, ನನ್ನನ್ನು ವಿನೀತಳನ್ನಾಗಿಸಿದೆ. ಬೆಳಕಿಗೆ ನನ್ನ ಬದ್ಧತೆ ಆಳಗೊಂಡಿದೆ. ಈ ದಿನದ ಪ್ರಾಮುಖ್ಯತೆಯನ್ನು ನೀವು ನನ್ನೊಂದಿಗೆ ಹಂಚಿಕೊಳ್ಳಲು ಬಯಸಿದ್ದಕ್ಕಾಗಿ ನಿಮಗೆ ಕೃತಜ್ಞಳಾಗಿದ್ದೇನೆ.

– ಹರ್ಡ ಲೇಟನ್, ಹಾಲೆಂಡ್


ಅಮೆರಿಕಾ ದೇಶದ ಅರಿಝೋನಾದಲ್ಲಿ ಕೂಡ ವೆಬ್‌ಕಾಸ್ಟ್ ಪ್ರಸಾರ ಅಷ್ಟುಕಾಲವೂ ಸ್ಪಷ್ಟವಾಗಿತ್ತು. ನಿಮ್ಮ ಸಂದೇಶ ಮಹತ್ವಪೂರ್ಣವಾಗಿತ್ತು ಮತ್ತು ಅರ್ಥಮಾಡಿಕೊಳ್ಳಲು ಸುಲಭವಾಗಿತ್ತು. ಇಂದು ರಾತ್ರಿ ಧ್ಯಾನ ಮಾಡುವ ಒಂದು ತಂಡ ನನ್ನ ಬಳಿ ಇದೆ ಮತ್ತು ನನಗೆ ಇತರ ಗುಂಪುಗಳು ತಿಳಿದಿವೆ, ಆದ್ದರಿಂದ ಇದು ಕ್ರಾಂತಿಯ ಉತ್ತಮ ಪ್ರಾರಂಭ. ಬೆಳಕಿಗಾಗಿ ನೀವು ಕೈಗೊಂಡಿರುವ ನಿಸ್ವಾರ್ಥ ಸೇವೆಗಾಗಿ ನಿಮ್ಮನ್ನು ಸನ್ಮಾನಿಸುತ್ತೇನೆ.

– ಕರೀಮ

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| 2012 - End or Beginning | 100/- |
| Preparing for 2012 | 100/- |
| Light Body & Other Realities | 75/- |
| Master-Pupil Talks | 60/- |
| iGuruji - Vol 1 | 150/- |
| iGuruji - Vol 2 | 120/- |
| iGuruji - Vol 3 | 150/- |
| iGuruji - Vol 4 | 150/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol-2 | 150/- |
| Guruji Speaks Part - I | 200/- |
| Guruji Speaks Part - II | 200/- |
| Guruji Speaks Vol - 3 | 150/- |
| Guruji Speaks Vol - 4 | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| 2012ಕ್ಕೆ ಸಿದ್ಧತೆಗಳು | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| २०१२ – सालाची तयारी (Marathi) | 100/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA/48/2012-14
Date of posting Newsletter-25th of Every Month. Posted at Bangalore GPO No. of Pages-8



ಗುರೂಜಿ ಕೃಷ್ಣಾನಂದ (1939)

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

# ಋಷಿಗಳಿಂದ ಸಂದೇಶ

(ಮೇ 7ರ ಸಮಾವೇಶದಲ್ಲಿ ಗುರೂಜಿಯವರ ಮಾತುಗಳ ಆಯ್ದ ಭಾಗಗಳು)

ಸಂಗ್ರಹ: ಜಯಂತ್ ದೇಶ್‌ಪಾಂಡೆ; ಅನು: ಸುಧಾಕರ್

ನನ್ನ ಮಾನವ ಬಂಧುಗಳೇ, ಇಂದು ನನ್ನ ಜೀವಮಾನದ ಅತಿಮುಖ್ಯವಾದ ದಿನ. ನಾನೊಬ್ಬ ಸಾಮಾನ್ಯ ಮನುಷ್ಯ ಆದರೆ ಈ ದಿನ ಋಷಿಗಳಿಂದ ಅತಿಮುಖ್ಯ ಸಂದೇಶವನ್ನು ಹೊತ್ತು ತಂದಿದ್ದೇನೆ. ಈ ಸಂದೇಶ ಈ ಭೂಮಿಯ ಮೇಲಿನ ಪ್ರತಿಯೊಬ್ಬರಿಗಾಗಿ.

ಇದು ಭರವಸೆಯ ಸಂದೇಶ. ಇದು ವಾಗ್ದಾನದ ಸಂದೇಶ.

ಸಂದೇಶ ಈ ರೀತಿ ಪ್ರಾರಂಭವಾಗುತ್ತದೆ.....

2012ರ ಕೊನೆಯಲ್ಲಿ ಸಂಭವಿಸಬಹುದು ಎಂದುಕೊಂಡಿರುವ ಬಹುತೇಕ ಘಟನೆಗಳು ಸಂಭವಿಸುತ್ತವೆ.

ಆದರೆ ಯಾರೂ ಭಯಪಡಬೇಕಾಗಿಲ್ಲ. ಪ್ರಪಂಚ ಕೊನೆಗೊಳ್ಳುವುದಿಲ್ಲ. ಈ ಘಟನೆಗಳ ಜೊತೆಗೂಡಿದೆಯೆಂದು ಭಯಪಡುತ್ತಿರುವ, ವಿನಾಶವನ್ನು ತಡೆಗಟ್ಟಬಹುದು. ಇದು ಸಂದೇಶದ ಅತಿಮುಖ್ಯ ಭಾಗ.

ಈ ವಿನಾಶಕ್ಕೂ, ಜನರ ಆಧ್ಯಾತ್ಮಿಕ ಪರಿವರ್ತನೆಗೂ ಸಂಬಂಧವಿದೆ. ಆಧ್ಯಾತ್ಮಿಕತೆ ಎಂದರೇನು? ಆಧ್ಯಾತ್ಮಿಕತೆ ಎಂದರೆ ಒಳ್ಳೆಯವರಾಗಿರುವುದು, ಪ್ರಾಮಾಣಿಕರಾಗಿರುವುದು ಮತ್ತು ಶಾಂತಿಯಿಂದಿರುವುದು ಅಷ್ಟೆ. ನಾವು ದೇವಸ್ಥಾನಗಳಿಗೆ ಹೋಗಬೇಕಾಗಿಲ್ಲ. ನಾವು ತೀರ್ಥಯಾತ್ರೆಗಳಿಗೆ ಹೋಗಬೇಕಾಗಿಲ್ಲ. ಇದು ಆಧ್ಯಾತ್ಮಿಕತೆಯ ಸಾರ. ಈ ಅರ್ಥವಿವರಣೆ, ಎಲ್ಲ ಜ್ಞಾನವನ್ನು ಮೇಲಿನ ಸ್ತರಗಳಿಂದ ತರುವ ಋಷಿಗಳಿಂದ ಬಂದಿದೆ.

ವಿನಾಶ ಆಧ್ಯಾತ್ಮೀಕರಣದೊಂದಿಗೆ ಏಕೆ ಸಂಬಂಧಿಸಿದೆ ಎಂದು ಯಾರಾದರೂ ಕೇಳಬಹುದು. ಅತಿಮುಖ್ಯವಾದ ವಾಸ್ತವವೆಂದರೆ, ನಾವು ಹೊಸ ಕಾಲಘಟ್ಟವಾದ 'ಹೊಸಯುಗ'ವನ್ನು ಪ್ರವೇಶಿಸುತ್ತಿದ್ದೇವೆ. ಹೊಸಯುಗದಲ್ಲಿ ಜೀವಿಸಲು ಮತ್ತು ಬಾಳಲು ಕನಿಷ್ಟ ನಿಬಂಧನೆಗಳೆಂದರೆ, ಒಳ್ಳೆಯತನ, ಪ್ರಾಮಾಣಿಕತೆ ಮತ್ತು ಶಾಂತಿ. ಶಾಂತಿ ಮತ್ತು ಪ್ರೀತಿಯಿಂದಿರಲು ಆಯ್ಕೆಮಾಡಿಕೊಳ್ಳದ ಜನರು ಬದುಕಿರಲಾರರು.

ಹೊಸಯುಗ ದೂರದಲ್ಲಿಲ್ಲ. ಇದು 2012ರ ಕೊನೆಯಲ್ಲಿ ಪ್ರಾರಂಭವಾಗುತ್ತದೆ. 2012ರ ಕೊನೆಯ ಹೊತ್ತಿಗೆ ಜನರೆಲ್ಲರೂ ಸಂತರಾಗುವುದಿಲ್ಲ. ಋಷಿಗಳು ಹೇಳುತ್ತಾರೆ, "ನೀವು ಸಂಪೂರ್ಣವಾಗಿ ಬದಲಾಗಬೇಕಾಗಿಲ್ಲ. ಆದರೆ ಆಯ್ಕೆ ಮಾಡಿಕೊಳ್ಳಬೇಕು. ಒಳ್ಳೆಯವರಾಗಲು ಆಯ್ಕೆ ಮಾಡಿಕೊಳ್ಳಬೇಕು, ಅಷ್ಟು ಸಾಕು." ಆಯ್ಕೆ ಮಾಡಿದಾಗ ಹೊಸಯುಗವನ್ನು ಪ್ರವೇಶಿಸಲು ನಾವು ಅರ್ಹರಾಗುತ್ತೇವೆ. ಒಮ್ಮೆ ಬಹಳ ಜನ ಆಯ್ಕೆ ಮಾಡಿದರೆ, ವಿನಾಶವನ್ನು ನಿಯಂತ್ರಿಸುವ ಋಷಿಗಳಿಗೆ, ಅದನ್ನು ಸಂಪೂರ್ಣವಾಗಿ ಅಥವಾ ಭಾಗಶ: ತಪ್ಪಿಸಲು ಕಾರಣ ಮತ್ತು ಸಮರ್ಥನೆ ಸಿಗುತ್ತದೆ.

ಬೆಳಕಿನಿಂದ ಕ್ರಾಂತಿ ಆಗುತ್ತಿರುವುದು ಪರಿವರ್ತನೆಗಾಗಿ. ಇದು ಸಿದ್ಧತೆಗಾಗಿ. ಇದು ನಾವು ಆಯ್ಕೆ ಮಾಡಿಕೊಳ್ಳಲು ಸಹಾಯ ಮಾಡುವುದಕ್ಕಾಗಿ. ಇದು ಬೆಳಕನ್ನು ಉಪಯೋಗಿಸಿಕೊಂಡು ಪ್ರಪಂಚದಾದ್ಯಂತ ಮಹತ್ತರ ಬದಲಾವಣೆಗಳನ್ನು ತರಲು ಸದ್ದಿಲ್ಲದೆ ಮಾಡುವ ಪ್ರಯತ್ನ.

ಈ ಸಂದೇಶ ಇಡೀ ಮನುಕುಲಕ್ಕಾಗಿ. ಎಲ್ಲ ದೋಷಯುಕ್ತ ವ್ಯವಸ್ಥೆಗಳು ಕುಸಿಯುತ್ತವೆ. ಅವು ಇದ್ದಕ್ಕಿದ್ದಂತೆ ಅಥವಾ ಕ್ರಮೇಣ ಕುಸಿಯಬಹುದು. ಕುಸಿತ ಇದ್ದಕ್ಕಿದ್ದಂತೆ ಉಂಟಾಗುವುದೆಂದು ನನ್ನ ಅನಿಸಿಕೆ. ವ್ಯವಸ್ಥೆಗಳು ಕುಸಿದಾಗ ಸಹಜವಾಗಿಯೇ ಅಸ್ತವ್ಯಸ್ತತೆ ಮತ್ತು ಗೊಂದಲ ಉಂಟಾಗುತ್ತದೆ. ಆದರೆ ಋಷಿಗಳು ಯೋಚನೆ ಮಾಡಬೇಡಿ ಎಂದು ಹೇಳುತ್ತಾರೆ. ಅವರಲ್ಲಿ ಯೋಜನೆಗಳಿವೆ. ಅವರು ನಮಗೆ ಸಹಾಯ ಮಾಡುತ್ತಾರೆ. ಈ ಘಟನೆಗಳನ್ನು ಅವರು ಅನೇಕ ಬಾರಿ ನೋಡಿದ್ದಾರೆ. ನಾವು ಫೋಟಾನ್ ಬೆಲ್ಟ್ ಪ್ರವೇಶಿಸುತ್ತಿರುವುದು ಇದು ಮೊದಲಸಲ ಅಲ್ಲ.

ದೋಷಯುಕ್ತ ವ್ಯವಸ್ಥೆಗಳು ಕುಸಿದಾಗ, ಹೊಸ ವ್ಯವಸ್ಥೆಗಳು ಅಸ್ತಿತ್ವಕ್ಕೆ ಬರುತ್ತವೆ. ಇದು ತಕ್ಷಣ ಆಗಬಹುದು ಅಥವಾ ಕ್ರಮೇಣವಾಗಿ ಆಗಬಹುದು. ಇದರ ಬಗ್ಗೆ ನಿರ್ಧಾರವನ್ನು ಇನ್ನೂ ತೆಗೆದುಕೊಂಡಿಲ್ಲ.

ಈ ಭೂಮಿಯ ಪ್ರತಿಯೊಬ್ಬರನ್ನೂ ನೇರವಾಗಿ ಸಂಪರ್ಕಿಸುತ್ತಾರೆ. ಋಷಿಗಳಲ್ಲಿ ಅಪಾರವಾದ ಕರುಣೆ ಮತ್ತು ಪ್ರೀತಿ ಇದೆ. ಬದಲಾವಣೆಗೊಳ್ಳದವರನ್ನೂ ಅಪಾರವಾದ ಪ್ರೀತಿಯಿಂದ ನೋಡಿಕೊಳ್ಳುತ್ತಾರೆ. ಅಂಥವರನ್ನು ಶಿಕ್ಷಿಸುವುದಿಲ್ಲ ಮತ್ತು ಕೈಬಿಡುವುದಿಲ್ಲ. ದೇವರ ಸಾಮ್ರಾಜ್ಯದಲ್ಲಿ ಶಿಕ್ಷೆ ಎಂಬುದಿಲ್ಲ. ಪ್ರತಿಯೊಬ್ಬರಿಗೂ ಮತ್ತೊಂದು ಅವಕಾಶವಿರುತ್ತದೆ. ಲಕ್ಷಾಂತರ ಬಾರಿ ವಿಫಲರಾದರೂ ಮತ್ತೊಂದು ಅವಕಾಶ ಸಿಗುತ್ತದೆ. ದೇವರ ಸಾಮ್ರಾಜ್ಯ ಪ್ರೀತಿಯಿಂದ ತುಂಬಿದೆ.

ನಮ್ಮಲ್ಲಿ ಹುದುಗಿರುವ ಸಾಮರ್ಥ್ಯಗಳಾದ ಮೂರನೇ ಕಣ್ಣು, ಟೆಲಿಪತಿ, ಪ್ರಾಣದ ಮೇಲೆ ಜೀವಿಸಿರುವುದು, ಇತ್ಯಾದಿಗಳು, ತೆರೆದುಕೊಳ್ಳುತ್ತವೆ. ವ್ಯವಸ್ಥೆಗಳು ಕುಸಿದಾಗ ನಮಗೆ ಆಹಾರ ಸಿಗದಿರಬಹುದು. ಆಗ ಪ್ರಾಣದ ಮೇಲೆ ಜೀವಿಸುವ ಶಕ್ತಿಯನ್ನು ಕೊಡುಗೆಯಾಗಿ ನಮಗೆ ಕೊಡಬಹುದು. ಮರುಕ್ಷಣದಲ್ಲೇ ಎಲ್ಲ ಜನರನ್ನು ಸಂಪರ್ಕಿಸಿ, ಸಹಾಯ ನೀಡುತ್ತಾರೆ.

ನಿನ್ನೆ, ಬುದ್ಧಪೂರ್ಣಿಮೆಯ ದಿನದಂದು ಒಂದು ವಿಶೇಷ ಚೈತನ್ಯ ಬಿಡುಗಡೆಯಾಯಿತು. ನಾವು ಚಾನಲ್ ಮಾಡಿದಾಗ ಈ ಚೈತನ್ಯವನ್ನೂ ಕೂಡ ಚಾನಲ್ ಮಾಡುತ್ತೇವೆ. ಈ ದಿನ ಚಾನಲ್ ಮಾಡಿದ ನಂತರ ದಯವಿಟ್ಟು ಚಾನಲ್ ಮಾಡುವುದನ್ನು ನಿಲ್ಲಿಸಬೇಡಿ. ಪ್ರತಿದಿನ ಕನಿಷ್ಟ 7 ನಿಮಿಷಗಳ ಕಾಲ ಚಾನಲ್ ಮಾಡಿ.

ಸಂದೇಶವನ್ನು ನಾನು ಸರಿಯಾಗಿ ತಲುಪಿಸಿದ್ದೇನೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ನಿಮ್ಮಲ್ಲಿರುವ ಬೆಳಕು, ಋಷಿಗಳಿಂದ ಬಂದ ಸಂದೇಶವನ್ನು ಅದರ ಪರಿಶುದ್ಧತೆ ಮತ್ತು ಸಮಗ್ರತೆಯೊಂದಿಗೆ ಗ್ರಹಿಸಿದೆ ಎಂಬುದು ನನಗೆ ಖಚಿತವಾಗಿದೆ. ಮಹಾನ್ ಋಷಿಗಳ ಸಂದೇಶಕಾರನಾಗಿ ನಿರ್ವಹಿಸಿದ ಈ ಸಮಯ, ನನ್ನ ಜೀವನದ ಅತ್ಯುತ್ತಮ ಘಳಿಗೆ. ■

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, ಡಾ॥ ಮೋದಿ ಮುಖ್ಯ ರಸ್ತೆ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ